ಆಂತರಿಕ ಪ್ರಸಾರಕ್ಕಾಗಿ ಮಾತ್ರ

ಜುಲೈ 2012 ಸಂಪುಟ 5 ಸಂಚಿಕೆ 4

ಶ್ರೀ ರಾಮಚಂದ್ರ ಮಿಷನ್®

India ECHOES
ONE WORLD ONE HUMANITY




# ಗುರುಗಳ ವರದಿ

## ಚೆನ್ನೈಯಲ್ಲಿ ಗುರುಗಳು

ಅಭ್ಯಾಸಿಗಳೊಂದಿಗಿನ ಮಾತುಕತೆಯಲ್ಲಿ ಗುರುಗಳು ಹೀಗೆ ಹೇಳಿದರು "ನಮ್ಮ ಕೆಲಸ ಇಷ್ಟೆ, ಕೇವಲ ಆತುರತೆಯ ಭಾವವನ್ನು ಪ್ರತಿಷ್ಠಾಪಿಸುವುದು, ಅದೇ ಸಮಯದಲ್ಲಿ ಭಯದ ಭಾವವನ್ನು ತೊಡೆದುಹಾಕುವುದು. ಸಾಮಾನ್ಯವಾಗಿ ಯಾವುದೇ ಕೆಲಸದಲ್ಲಿ ಆತುರತೆಯಿದ್ದಾಗ ಅದರೊಟ್ಟಿಗೆ ಭಯವೂ ಇರುತ್ತದೆ,ಆದರೆ ಸಹಜಮಾರ್ಗದಲ್ಲಿ ನಾವು ಆತುರ ಭಾವವನ್ನು ಮಾತ್ರ ಇರಿಸಿಕೊಂಡು ಭಯದ ಭಾವನೆಯನ್ನು ತೊರೆಯಬೇಕು"

## ಹೊಸ ವರ್ಷದ ಹಬ್ಬಗಳು

ಏಪ್ರಿಲ್ 13 ತಮಿಳು ಪಂಚಾಂಗದ ಪ್ರಕಾರ ಹೊಸ ವರ್ಷ. ಗುರುಗಳು ಸತ್ಸಂಗವನ್ನು ನೆರವೇರಿಸಿದರು. ಪ್ರತಿಯೊಬ್ಬರ ದೃಷ್ಟಿಯೂ ತಮ್ಮ ಪ್ರೀತಿಯ ಗುರುಗಳ ಕಡೆಗಿದ್ದಿತು. ಗುರುಗಳೊಂದಿಗೆ ಆಂತರಿಕವಾದ ವೈಯುಕ್ತಿಕ ಸಂಬಂಧವನ್ನು ಪ್ರತಿಯೊಬ್ಬರೂ ಅನುಭವಿಸಿದರು. ಗುರುಗಳು ಒಂದು ವಿವಾಹವನ್ನು ನೆರವೇರಿಸಿದರು. ಅವರು ಆಯಾಸಗೊಂಡು ಸುಸ್ತಾಗಿದ್ದರೂ ತಮ್ಮನ್ನು ಕಾಣಲು ಶುಭಾಶಯ ಹೇಳಲು ಬಂದ ಅಭ್ಯಾಸಿಗಳನ್ನು ತಮ್ಮ ಕುಟೀರದಲ್ಲಿ ಭೇಟಿಯಾದರು.

ಏಪ್ರಿಲ್ 14 ಶನಿವಾರ ಕೇರಳದ ಹೊಸವರ್ಷ 'ವಿಶು'. ಕೇರಳದಿಂದ ಗುರುಗಳೊಟ್ಟಿಗಿರಲು ಸುಮಾರು 150 ಮಂದಿ ಅಭ್ಯಾಸಿಗಳು ಬಂದಿದ್ದರು. ಅಂದು ಸಂಜೆ ಗುರುಗಳು ಕಾಟೇಜ್‌ನ ಹೊರ ಭಾಗದಲ್ಲಿ ಕುಳಿತಾಗ ಹತ್ತು ಮಂದಿಗಳ ಗುಂಪಿನಂತೆ ಅಭ್ಯಾಸಿಗಳು ಅವರನ್ನು ಭೇಟಿ ಮಾಡಿದರು. ಗುರುಗಳು ಎಲ್ಲರಿಗೂ ವೈಯುಕ್ತಿಕ ಗಮನ ನೀಡಿ ನಂತರ ತಮ್ಮ ಕೆಲಸಗಳಿಗಾಗಿ ಒಳ ಹೋದರು. ಈ ಅಭ್ಯಾಸಿಗಳಲ್ಲನೇಕರು ಆರ್ದ್ರರಾಗಿದ್ದುದನ್ನು ಗಮನಿಸಬಹುದಾಗಿತ್ತು.

## ಅವರಿಗೊಂದಷ್ಟು ವಿರಾಮ

ಸೋಮವಾರ ಏಪ್ರಿಲ್ 16 ಗುರುಗಳು ಸತ್ಸಂಗದ ನಂತರ ಮೊರಾಕ್ಕೊದಿಂದ ಬಂದಿದ್ದ ಐವರು ಅಭ್ಯಾಸಿಗಳೊಂದಿಗೆ ಮಾತನಾಡಿದರು. ಈ ಎಲ್ಲಾ ಅಭ್ಯಾಸಿಗಳ ಕಂಗಳಲ್ಲೂ ನೀರಿತ್ತು. ಒಬ್ಬ ಸಹೋದರಿಯು ಪ್ರೀತಿ ಪಾತ್ರರನ್ನು ಕಳೆದುಕೊಳ್ಳುವುದರ ಬಗ್ಗೆ ಗುರುಗಳಿಗೆ ಹೇಳಲು ಅವರು "ಪ್ರತಿಯೊಬ್ಬರೂ ತಮ್ಮ ಹೃದಯವನ್ನು ಎಲ್ಲರನ್ನೂ ಒಳಗೊಳ್ಳುವಷ್ಟು ವಿಶಾಲವನ್ನಾಗಿಸಿಕೊಳ್ಳಬೇಕು. ನೀವು ನೋಡುವಂತೆ ಎಷ್ಟೊಂದು ಜನ ಅಭ್ಯಾಸಿಗಳು ಬರುತ್ತಾರೆ ಮತ್ತು ಹೋಗುತ್ತಾರೆ, ಅವರೆಲ್ಲರಿಗೂ ಗುರುಗಳ ಹೃದಯದಲ್ಲಿ ಸ್ಥಾನವಿದೆ. ನಾವು ಕೆಲವರನ್ನು ಮಾತ್ರ ಪ್ರೀತಿಸಿದಾಗ, ಕಳೆದುಕೊಂಡಾಗ ನಷ್ಟವನ್ನು ಅನುಭವಿಸುತ್ತೇವೆ. ಆದರೆ ಹೃದಯ ಮುಕ್ತವಾಗಿದ್ದು ಎಲ್ಲರನ್ನೂ ಪ್ರೀತಿಸುವಾಗ ಯಾವುದೇ ನಷ್ಟವಿರುವುದಿಲ್ಲ."


ಸದಾ ಕಾಟೇಜ್‌ನಲ್ಲಿ ತುಂಬಾ ಜನರಿದ್ದು ಎಲ್ಲರೂ ತಮ್ಮ ಕಡೆ ಗಮನ ನೀಡಬೇಕೆಂದು, ತಾವು ಎಲ್ಲರ ನಿರೀಕ್ಷೆಯನ್ನು ಮುಟ್ಟಲು ಪ್ರಯತ್ನಿಸುತ್ತಿದ್ದರೂ ಒತ್ತಾಯಿಸುತ್ತಿರುತ್ತಾರೆ ಎಂದು ಗುರುಗಳು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ನಂತರ ಗುರುಗಳು ವಿರಾಮ ಬಯಸಿ ಅವರು ವಿಶ್ರಾಂತಿ ಪಡೆಯಲು ಸಾಧ್ಯವಿದ್ದ ಸ್ಥಳವೊಂದಕ್ಕೆ ತೆರಳಿದರು. ಅವರು ಎಲ್ಲಿದ್ದರೆಂಬುದನ್ನು ರಹಸ್ಯವಾಗಿಡಲಾಯಿತು ಇದು ಗುರುಗಳಿಗೆ ತಾವು ಬಯಸಿದ ಏಕಾಂತತೆ ಮತ್ತು ವಿಶ್ರಾಂತಿಯನ್ನು ಒದಗಿಸಿತು. ಏಪ್ರಿಲ್ 27ರಂದು ಗುರುಗಳು ತಮ್ಮ ಕಾಟೇಜ್‌ಗೆ ಮರಳಿದರು.

## ಬಾಬೂಜಿಯವರ ಜನ್ಮದಿನೋತ್ಸವದ ಆಚರಣೆಗಳು

ಏಪ್ರಿಲ್ 29ರ ಭಾನುವಾರ ಗುರುಗಳು ಬೆಳಗಿನ ಸತ್ಸಂಗ ನಡೆಸಿಕೊಟ್ಟ ನಂತರ ಎಂಟು ಮದುವೆಗಳನ್ನು ನೆರವೇರಿಸಿದರು. ನಂತರ ಕಾರ್ಯಕಾರಿ ಸಮಿತಿಯ ಸಭೆಯು ಗುರುಗಳ ಕಾಟೇಜ್‌ನಲ್ಲಿ ನಡೆಯಿತು. ಸಂಜೆ ಡೆನ್ಮಾರ್ಕ್‌ನ ವ್ರಾಡ್ಸ್ ಸಾಂದೆ ಆಶ್ರಮದಿಂದ ಸೊ.ಭಾರ್ಗವ್ ಮತ್ತು ಸೊ.ಕಮಲೇಶ್‌ರೊಂದಿಗೆ ಒಂದು ವಿಡಿಯೊ ಸಂವಾದದ ವ್ಯವಸ್ಥೆಯಾಗಿತ್ತು. ಗುರುಗಳು ಮರುದಿನ ಅಲ್ಲಿನ ಅಭ್ಯಾಸಿಗಳನ್ನುದ್ದೇಶಿಸಿ ಮಾತನಾಡುವುದಿದ್ದದರಿಂದ ಸಂಪರ್ಕವ್ಯವಸ್ಥೆಯನ್ನು ಪರೀಕ್ಷಿಸಲು ಬಂದಿದ್ದರು.

ಗುರುಗಳು ಏಪ್ರಿಲ್ 30ರಂದು ಬಹು ಬೇಗನೆ ಎದ್ದರು. ಅವರು ಅಂದು ನಡೆಸಿಕೊಟ್ಟ ಸತ್ಸಂಗದ ಅವಧಿಯು 1 ಗಂಟೆ 10 ನಿಮಿಷಗಳ ಅವಧಿಯದಾಗಿತ್ತು. ನಂತರ ಅವರು ಮಾತನಾಡಿ ದಿವ್ಯಲೋಕದ ಪಿಸುಮಾತುಗಳು ನಾಲ್ಕನೆ ಭಾಗವನ್ನೂ, ಅದರೊಂದಿಗೆ ಕೆಲವರು ತಮ್ಮದೇ ಧ್ವನಿಗಳಲ್ಲಿ ಇದೇ ಗ್ರಂಥದ ಕೆಲ ಭಾಗಗಳನ್ನು ನಿರೂಪಿಸಿರುವ ಆಡಿಯೊ ಸಿಡಿಯನ್ನು ಬಿಡುಗಡೆಗೊಳಿಸಿದರು. ಬಿಡುಗಡೆಯ ನಂತರ ಈ ಸಂದೇಶಗಳ ಕೆಲ ತುಣುಕುಗಳನ್ನು ಕೇಳಿಸಲಾಯಿತು ಗುರುಗಳು ಮತ್ತೆ ಕಿರು ಭಾಷಣ ಮಾಡಿ ದಿವ್ಯಲೋಕದ ಪಿಸುಮಾತುಗಳನ್ನು ಓದುವುದರ ಮಹತ್ವವನ್ನು ಒತ್ತಿ ಹೇಳಿದರು.

ಬೆಳಗಿನ 11ಕ್ಕೆ ಸೋ.ಬಾಲಸುಬ್ರಮಣ್ಯಂ ಮಾತನಾಡಿದುದನ್ನು ಗುರುಗಳು ತಮ್ಮ ಕಚೇರಿಯಿಂದಲೇ ಆಸಕ್ತಿಯಿಂದ ಕೇಳಿದರು. ಅದು ಬಹಳ ಪರಿಣಾಮಕಾರಿಯಾದ ಭಾಷಣವಾಗಿದ್ದು ಗುರುಗಳನ್ನೂ ಒಳಗೊಂಡಂತೆ ಅಭ್ಯಾಸಿಗಳೆಲ್ಲರ ಮನಸೂರೆಗೊಂಡಿತು. ಅವರು ಗುರುಗಳುಗಳ ಜೀವನದ



ಅನೇಕ ನಿದರ್ಶನಗಳನ್ನು ಹೇಳುತ್ತ ಸುಮ್ಮನೆ ಅವರನ್ನು ಹೊಗಳುವುದೋ ಅಥವಾ ತೆಗಳುವುದೋ ಮಾಡದೆ ಅವರ ಜೀವನಗಳಿಂದ ಕಲಿಯುವುದು ಮತ್ತುಅವರು ಬದುಕಿದ ರೀತಿಯನ್ನು ಅನುಸರಿಸುವುದು ಮಾಡಬೇಕೆಂದರು.

ಗುರುಗಳು ಆಯಾಸಗೊಂಡಿದ್ದರಿಂದ ಯುರೋಪಿನ ಸೆಮಿನಾರ್‌ಗಾಗಿ ಅವರು ಮಾಡಬೇಕಿದ್ದ ವಿಡಿಯೊ ಸಂವಾದವನ್ನು ರದ್ದುಗೊಳಿಸಲಾಯಿತು. ಅವರು ಮಧ್ಯಾಹ್ನ ರೊಮಾನಿಯಾದ ಐವರು ಅಭ್ಯಾಸಿಗಳನ್ನು ಭೇಟಿಯಾದರು. ಗುರುಗಳು ರೊಮಾನಿಯಾ ಹಾಗು ರಷ್ಯಾಗಳಲ್ಲಿ ಹೇಗೆ ಪಾಶ್ಚಾತ್ಯ ಸಂಸ್ಕೃತಿಯು ಸ್ಥಳೀಯ ಸಂಸ್ಕೃತಿಯನ್ನು ಬಾಧಿಸುತ್ತಿದೆ ಎಂಬುದರ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದರು.

ಸಂಜೆಯ ಸತ್ಸಂಗ ನಡೆಯುತ್ತಿದ್ದ ಸಮಯದಲ್ಲಿ ಗುರುಗಳು ಆಶ್ರಮದ ಸುತ್ತ ತಮ್ಮ ಗಾಲ್ಫ್ ಗಾಡಿಯಲ್ಲಿ ಸುತ್ತು ಹಾಕಿದರು. ಮಕ್ಕಳನ್ನು ಮಾತನಾಡಿಸಲು ತಮ್ಮ ಗಾಡಿಯನ್ನು ಅನೇಕ ಸ್ಥಳಗಳಲ್ಲಿ ನಿಲ್ಲಿಸಬೇಕಾಯಿತು. ಸಂಜೆ ಸೋ.ಸೌಮ್ಯ ಮತ್ತವರ ತಂಡದವರಿಂದ ನೃತ್ಯ ಕಾರ್ಯಕ್ರಮವಿದ್ದು ಆ ದಿನವನ್ನು ಅವರ ಅದ್ಭುತ ಪ್ರಸ್ತುತಿಯೊಂದಿಗೆ ಕೊನೆಗೊಳಿಸಲಾಯಿತು.

## ಸಮಾರಂಭದ ನಂತರ

ಮೇ 4ರ ಸಂಜೆ ಉದ್ಯಾನದಲ್ಲಿದ್ದ ಬೃಹತ್ ವೃಕ್ಷವೊಂದನ್ನು ಬೇರೆಡೆಗೆ ಸ್ಥಳಾಂತರಿಸುವುದನ್ನು ನೋಡಲು ಗುರುಗಳು ಹೋದರು. ಮರವನ್ನು ಸ್ಥಳಾಂತರಿಸುವ ಪೂರ್ವ ಸಿದ್ಧತೆಗಳೆಲ್ಲವೂ ಆಗಿದ್ದು ಬಹಳಷ್ಟು ಸ್ವಯಂಸೇವಕ ಅಭ್ಯಾಸಿಗಳು ಸೇರಿ ಮರವನ್ನು ಅಲ್ಲಿಂದ ಎತ್ತಿ ಬೇರೊಂದು ಜಾಗಕ್ಕೆ ಸ್ಥಳಾಂತರಿಸಿದರು. ಗುರುಗಳು ಇದೆಲ್ಲವನ್ನೂ ಗಮನಿಸುತ್ತ ಸಲಹೆ ನೀಡುತ್ತಾ ಇದ್ದು ಮರವನ್ನು ಹೊಸ ಸ್ಥಳದಲ್ಲಿ ನೆಟ್ಟ ನಂತರ ಅದಕ್ಕೆ ನೀರುಣಿಸಿದರು.

ಗುರುಗಳು ಯುಎಸ್‌ಎಯ ಅಭ್ಯಾಸಿ ಸೊ.ರೆವೂರ್ ವೆಲ್ಟ್ಮನ್ ರವರ 'ಟ್ರಾನ್ಸ್‌ಫಾರ್ಮಿಂಗ್ ಸಾಲಿಟ್ಯೂಡ್' ಎಂಬ ಟೀಇಡಿ ಪ್ರಸ್ತುತಿಯನ್ನು ನೋಡಿದರು. ಅವರು ಹೇಗೆ ನಮ್ಮ ಜೀವನ ಶಬ್ದಭರಿತವಾಗಿಬಿಟ್ಟಿದೆ ಮತ್ತು ನಮ್ಮ ಆಂತರ್ಯದ ಸಂಪರ್ಕವನ್ನು ಧ್ಯಾನದ ಮೂಲಕ ಹೇಗೆ ಮತ್ತೆ ಹೊಂದಬಲ್ಲೆವು ಎಂಬುದನ್ನು ಕುರಿತು ಮಾತನಾಡಿದರು.

ಒಂದು ಸಂಜೆ ಗುರುಗಳು ತಮ್ಮ ಮಲಗುವ ಕೋಣೆಯಿಂದ ಕಚೇರಿಗೆ ಹೋಗುವಾಗ ಸೋದರಿಯೊಬ್ಬರನ್ನು ನೋಡಿದವರೇ ಒಂದು ಚೀಲದ ಬಳಿಹೋಗಿ ಅದರೊಳಗಿಂದ ಹಣ್ಣನ್ನು ತೆಗೆದು ಆಕೆಗೆ ಕೊಟ್ಟರು. ಹಣ್ಣು ಪಡೆದ ಆಕೆ ಗುರುಗಳೇ ನಾನೀಗ ಗರ್ಭಿಣಿಯಾಗಿರುವೆ ಎನ್ನಲು ಅವರು ಸುಮ್ಮನೆ "ಆಶೀರ್ವಾದಗಳು" ಎಂದರು.

ಮತ್ತೊಂದು ರಾತ್ರಿ ಊಟದ ಮುನ್ನ ಗುರುಗಳು ಅಭ್ಯಾಸಿಯೊಬ್ಬರೊಡನೆ ಮಾತನಾಡುತ್ತ ತಮಿಳು ಸೂಕ್ತಿಯೊಂದನ್ನು ಹೇಳಿದರು " ಹುಲಿಗೆ ಹಸಿವಾಗಿದ್ದರೂ ಹುಲ್ಲು ತಿನ್ನುವುದಿಲ್ಲ".ಅದನ್ನು ವಿಸ್ತರಿಸುತ್ತ ಗುರುಗಳು ಅದು ಅಹಂಕಾರ ಅಥವಾ ದರ್ಪ ಆಗಿರದೆ ಹುಲಿಯ ಸಹಜ ಸ್ವಭಾವವೇ ಆಗಿದ್ದು ಅದು ಸುಮ್ಮನೆ ಅದನ್ನು ಅನುಸರಿಸುತ್ತದೆ. ಹಾಗೇ ಸಸ್ಯ ಮತ್ತು ಪ್ರಾಣಿ ಸಂಕುಲಗಳು ತಮ್ಮ ಸಹಜ ಸ್ವಭಾವಕ್ಕೆ ಅಂಟಿಕೊಂಡಿದ್ದು ಅದರಿಂದ ಕದಲುವುದಿಲ್ಲ. ಮನುಷ್ಯನೂ ಹಾಗೆಯೇ ಇರಬೇಕಿತ್ತು, ಆತ ಮನುಷ್ಯ ಸಹಜವಾದ ಮಾನವೀಯ ಗುಣಗಳಂತೆ ಬದುಕಿ ಅವನ್ನು ಮಾತ್ರ ತೋರಿಸಬೇಕಿತ್ತು, ಆದರಾತ ಮೃಗೀಯ ಗುಣಗಳನ್ನು ತೋರಿಸುತ್ತಿದ್ದಾನೆ ಎಂದರು.



## ಬೀದರ್ ಅಭ್ಯಾಸಿಗಳಿಗಾಗಿ ಕಾರ್ಯಾಗಾರ

ಮೇ 11ರಂದು ಗುರುಗಳು ಅಲಹಬಾದ್ ಬ್ಯಾಂಕ್‌ಗೆ ಹೋಗಿ ನಂತರ ಡಾರ್ಮ್ ಎ ದಲ್ಲಿದ್ದ ನೂರು ಮಂದಿ ಬೀದರ್‌ನ ಅಭ್ಯಾಸಿಗಳನ್ನು ಭೇಟಿ ಮಾಡಲು ಹೋದರು. ಅವರು ಅಭ್ಯಾಸಿಗಳೊಡನೆ ಹಿಂದಿಯಲ್ಲಿ ಮಾತನಾಡಿ ನಂತರ ಅಲ್ಲಿದ್ದ ಎಲ್ಲರಿಗೂ ಬೈಠಕನ್ನು ಕೊಟ್ಟರು. ಸಂಜೆ ಅವರು ಅಸ್ವಸ್ಥರಾಗಿದ್ದು ಉಸಿರಾಟದ ಸಮಸ್ಯೆಯಿತ್ತು. ಅವರು ಬೆಳಗ್ಗೆ ಬ್ಯಾಂಕ್‌ಗೆ ಹೋಗಿದ್ದಾಗ ಅಲ್ಲಿ ಹೆಚ್ಚಿನ ಧೂಳು ಇದ್ದು ಅದು ಅವರಿಗೆ ಸಮಸ್ಯೆಯಾಯಿತೆಂದು ತಿಳಿದು ಬಂತು.

ಮೇ 13ರ ಭಾನುವಾರ ಬೆಳಗಿನ ಸತ್ಸಂಗವನ್ನು ಗುರುಗಳು ನಡೆಸಿಕೊಟ್ಟರು. ನಂತರ ಸೋ.ಚಕ್ರಪಾಣಿಯವರು ತಮಿಳಿನಲ್ಲಿ ಮಾತನಾಡಿ ಮನುಷ್ಯನಿಗೆ ಇತರರ ಕಷ್ಟದ ಸಮಯದಲ್ಲಿ ಸಹಾಯ ಮಾಡಬಹುದಾದ ಸಾಮರ್ಥ್ಯವಿದ್ದು ಅದು ಯಾವುದೇ ಯಂತ್ರ ಮತ್ತಿತರೆ ಶಕ್ತಿಗಳಿಗಿಂತಲೂ ಮಿಗಿಲಾದುದಾಗಿದ್ದು ನಮ್ಮೊಳಗೆ ಅಡಗಿರುವ ಇಂತಹ ಸಾಮರ್ಥ್ಯವನ್ನು ನಮ್ಮ ಆಧ್ಯಾತ್ಮ ಸಾಧನೆಗೆ ತೊಡಕಾಗಿರುವ ಎಲ್ಲಾ ಸಮಸ್ಯೆಗಳನ್ನೂ ಎದುರಿಸಲು ಬಳಸಿ ಅಧ್ಯಾತ್ಮದ ಗುರಿಯನ್ನು ಕಡಿಮೆ ಅವಧಿಯಲ್ಲಿ ಹೊಂದಬೇಕೆಂದರು.

ಗುರುಗಳು ರಷ್ಯನ್ ಮತ್ತು ಇತರೆ ಭಾಷೆಗಳನ್ನು ಕಲಿಯುವುದರ ಬಗ್ಗೆ ಮಾತನಾಡುತ್ತಿದ್ದರು. ಒಬ್ಬ ಅಭ್ಯಾಸಿ "ಗುರುಗಳೇ ನಾನು ಯಾವುದೇ ಉದ್ದೇಶವಿಲ್ಲದ್ದರಿಂದ ಹೊಸ ಭಾಷೆಗಳನ್ನು ಕಲಿಯುವಲ್ಲಿ ನನ್ನನ್ನು ತೊಡಗಿಸಿಕೊಳ್ಳಲಾಗುತ್ತಿಲ್ಲ" ಎಂದರು. ಅದಕ್ಕೆ ಗುರುಗಳು "ಭಾಷೆ ಕಲಿಯುವುದರಿಂದ ನೀನು ಆ ಭಾಷೆಯಲ್ಲಿ ಪಾರಂಗತನಾಗುತ್ತೀಯ, ಅದಕ್ಕಿಂತ ಬೇರಾವ ಉದ್ದೇಶ ನಿನಗೆ ಬೇಕು? ಪಾಶ್ಚಾತ್ಯ ಸಂಸ್ಕೃತಿ ನಮ್ಮೆಲ್ಲರನ್ನೂ ಬಹಳ ಕೆಡಿಸಿದೆ. ನಾವೇನೇ ಮಾಡಬೇಕಿದ್ದರೂ ಅದರಿಂದ ನಮಗೇನು ಸಿಗುತ್ತದೆಂದು ಕೇಳುತ್ತೇವೆ. ನಾನು ಧ್ಯಾನ ಪ್ರಾರಂಭಿಸಲು ಕೆಲವರಿಗೆ ಹೇಳಿದಾಗಲೂ ಅವರು ಕೇಳುವುದಿದನ್ನೇ, ನನಗೇನು ಸಿಗುತ್ತದೆ? ನಿಮಗೇನು ಸಿಗುವುದಿಲ್ಲ, ಆದರೆ ನೀವು ಏನೋ ಆಗುತ್ತೀರಿ. ಇಲ್ಲೂ ಅದೇ ಅನ್ವಯಿಸುತ್ತದೆ" ಎಂದರು.

## ಕಾರ್ಯಾಗಾರ –ಅಂಡಮಾನ್ ನಿಕೋಬಾರ್ ದ್ವೀಪಗಳು ಮತ್ತು ಹುಬ್ಬಳ್ಳಿ ಕೇಂದ್ರಗಳಿಗೆ

ಅಂಡಮಾನ್ ನಿಕೋಬಾರ್ ದ್ವೀಪಗಳ ಅಭ್ಯಾಸಿಗಳ ಒಂದು ಗುಂಪು ಮತ್ತು ಹುಬ್ಬಳ್ಳಿ ಕೇಂದ್ರದಿಂದ ಬಂದಿದ್ದ ಮತ್ತೊಂದು ಅಭ್ಯಾಸಿಗಳ ಗುಂಪು 15 ಮೇಯಿಂದ ಒಂದು ವಾರದ ಕಾಲ ಆಶ್ರಮದಲ್ಲಿ ತಂಗಿದ್ದರು. ಅಂಡಮಾನ್ ಮತ್ತು ನಿಕೊಬಾರ್ ದ್ವೀಪಗಳಿಂದ ನೂರು ಜನ ಅಭ್ಯಾಸಿಗಳು ಬಂದಿದ್ದಾರೆಂಬುದನ್ನು ತಿಳಿದು ಗುರುಗಳಿಗೆ ಸಂತೋಷವಾಯಿತು. ಪ್ರಯಾಣವು ದುಬಾರಿಯಾದರೂ ಈ ಕಾರ್ಯಾಗಾರದಲ್ಲಿ ಭಾಗವಹಿಸಲು ಅಲ್ಲಿನ ಅಭ್ಯಾಸಿಗಳು ಶ್ರಮವಹಿಸಿ ಬಂದಿದ್ದರು.

"...ಹಾಗಾಗಿ ಪ್ರೇಮವು ಸ್ಥಳ ಮತ್ತು ಕಾಲದ ಅಂತರವನ್ನು ಅಪ್ರಾಧಾನ್ಯ ಮಾಡುತ್ತದೆ. ನೀವು ಯಾರನ್ನಾದರೂ ಪ್ರೇಮಿಸಿದರೆ ಆವನು ಅಥವಾ ಅವಳು ಎಲ್ಲಿರುವರೆಂದು ಲೆಕ್ಕಿಸುವುದಿಲ್ಲ. "ಅವನ ನನ್ನ ಮನದಲ್ಲಿ ಸದಾ ಇರುವನು" ಎಂದು ಹೇಳುವಿರಿ. ನಮ್ಮ ಮನದೊಳಗೆ ಅಥವಾ ಹಾಗೆ ಹೇಳುವುದಾದರೆ ಹೃದಯದಲ್ಲಿ ಏನಾದರೂ ಬರುವವರೆಗೆ ಸ್ಥಳ ಮತ್ತು ಕಾಲದ, ಅದರ ನಿಬಂಧನೆಗಳ ಅಧೀನರಾಗುತ್ತೇವೆ. ನೀವು ಅಭ್ಯಾಸಿಯಾಗಿರಲಿ, ಇಲ್ಲದಿರಲಿ, ಖುಷಿಯಾಗಿರಲಿ, ಇಲ್ಲದಿರಲಿ, ಪ್ರೇಮಿಸದಿದ್ದರೆ ಅಂತರವಿದ್ದೇ ಇರುತ್ತದೆ."

18 ಮೇ 2012, ಚೆನ್ನೈ









ಗುರುಗಳು ಈ ಅಭ್ಯಾಸಿಗಳನ್ನು 18ರಂದು ಭೇಟಿಯಾದರು. ಸೊ.ಸೋಮಕುಮಾರ್ ಮೊದಲು ಭಾಷಣ ಮಾಡಿದ ನಂತರ ಗುರುಗಳು ಮಾತನಾಡಿ ಸತ್ಸಂಗ ನಡೆಸಿಕೊಟ್ಟರು.ನಂತರ "ಕಾಲ ಮತ್ತು ದೇಶದ ದೂರದ ವ್ಯತ್ಯಾಸ ಪ್ರೇಮವಿದ್ದಲ್ಲಿ ಮುಖ್ಯವಾಗುವುದಿಲ್ಲ" ಎಂದರು.

ಮೇ 19ರಂದು, ಗುರುಗಳು ಒಂದೇ ಮಗ್ಗುಲಲ್ಲಿ ಮಲಗಿದ್ದರಿಂದ ಬೆಳಗ್ಗೆ ಎದ್ದಾಗ ಬೆನ್ನು ನೋವು ಕಾಣಿಸಿಕೊಂಡಿತು. ಅವರಿಗೆ ನೋವು ಶಮನಕ್ಕೆ ಔಷಧೋಪಚಾರ ಮಾಡಲಾಯಿತು. ಸಂಜೆಗೆ ಗ್ರಂಥಾಲಯದಲ್ಲಿ ಏರ್ಪಡಿಸಿದ್ದ ಚಿತ್ರಪ್ರದರ್ಶನ ನೋಡಲು ಗುರುಗಳು ಹೋದರು. ಚಿತ್ರಗಳನ್ನು ನೋಡಿದ ನಂತರ ತಮ್ಮ ಕಚೇರಿಗೆ ಹೋಗಿ ಲೆಕ್ಕ ವಿಭಾಗಲ್ಲಿ ಕೆಲ ಕಾಲವಿದ್ದು ತಮ್ಮ ಕಾಟೇಜ್‌ಗೆ ಮರಳಿದರು.

ರಾತ್ರಿಯ ಊಟದ ನಂತರ ಹತ್ತು ವರ್ಷ ವಯಸ್ಸಿನ ಹುಡುಗನೊಬ್ಬ ಗುರುಗಳನ್ನು ಕಂಡು ಒಂದು ಪತ್ರವನ್ನು ನೀಡಲು ಪ್ರಯತ್ನಿಸಿದ. ಸ್ವಲ್ಪ ಸಮಯದ ನಂತರ ಗುರುಗಳನ್ನು ಕಾಣಲು ಸಾಧ್ಯವಾಗಿಸಿಕೊಂಡ ಆತ ಅವರೊಂದಿಗೆ ಕೆಲ ಸಮಯ ಕಳೆದ. ಬಾಲಕನು ಗುರುಗಳೊಂದಿಗೆ ತನ್ನ ಸಮಸ್ಯೆಯನ್ನು ಹೇಳಿಕೊಂಡಾಗ ಗುರುಗಳು ಅವನಿಗೆ ಕೆಲವು ಸಲಹೆಗಳನ್ನಿತ್ತರು. ಗುರುಗಳು ಹೇಗೆ ಈ ಹುಡುಗನೆಡೆಗೆ ತಮ್ಮ ಸಂಪೂರ್ಣ ಕಾಳಜಿ ತೋರಿದರೆಂಬುದು ಕುತೂಹಲಕಾರಿಯಾಗಿತ್ತು.

## ಆಶ್ರಮದಲ್ಲಿ ನಿರ್ಮಾಣ ಕಾರ್ಯಗಳು

ಧ್ಯಾನ ಮಂದಿರದ ಛಾವಣಿಯ ಹೆಂಚುಗಳನ್ನು ಬದಲಿಸಿ ಅಲ್ಲಿಗೆ ಕಾಂಕ್ರೀಟ್ ಹಾಕಿ ನೀರಿನ ಸೋರುವಿಕೆಯ ದುರಸ್ತಿ ಮಾಡಲಾಯಿತು. ವಾರಾಂತ್ಯದಲ್ಲಿ ಅನೇಕ ಕೇಂದ್ರಗಳಿಂದ ಸ್ವಯಂಸೇವಕರುಗಳು ಬಂದು ಈ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಭಾನುವಾರದ ಸತ್ಸಂಗ ಮಾತ್ರ ಧ್ಯಾನ ಮಂದಿರದಲ್ಲಿ ನಡೆದು ದಿನನಿತ್ಯದ ಸತ್ಸಂಗಗಳು ಗ್ರಂಥಾಲಯದ ಕೆಳಗೆ ನಡೆಯುತ್ತಿದ್ದವು.

ಗುರುಗಳು ಮೇ 20ರಂದು ಪೂರಾ ಒಂದು ಗಂಟೆಯ ಕಾಲ ಸತ್ಸಂಗ ನಡೆಸಿಕೊಟ್ಟರು. ಮಧ್ಯಾಹ್ನ ಲಂಡನ್ ಆಶ್ರಮದ ಉದ್ಘಾಟನೆ ಇದ್ದುದರಿಂದ ಲಂಡನ್ ಆಶ್ರಮದ ಅಭಾಸಿಗಳೊಡನೆ ವಿಡಿಯೊ ಸಂವಾದವನ್ನು ನಡೆಸಿದರು. ಅದು ಅಲ್ಪ ಅವಧಿಯದದ್ದಾದರೂ ಲಂಡನ್ ಅಭ್ಯಾಸಿಗಳು ಗುರುಗಳನ್ನು ನೋಡಿ ರೋಮಾಂಚನಗೊಂಡರು.

ಸಂಜೆ ಅಂಡಮಾನ್ ನಿಕೋಬಾರ್ ಅಭ್ಯಾಸಿಗಳೊಡನೆ ಗುರುಗಳು ಛಾಯಾಚಿತ್ರವನ್ನು ತೆಗೆಸಿಕೊಂಡರು. ಇದರ ನಂತರ ಅವರು ಆರೋಗ್ಯ ಕೇಂದ್ರಕ್ಕೆ ಹೋಗುವ ಆಲೋಚನೆಯಲ್ಲಿದ್ದರೂ ಮನಸು ಬದಲಾಯಿಸಿ ಮತ್ತೆ ತಮ್ಮ ಕಾಟೇಜ್‌ಗೆ ಹಿಂದಿರುಗಿ ಹಾಲ್‌ನಲ್ಲಿ ಕುಳಿತು ಎಲ್ಲರಿಗೂ ಬೈಠಕ್ ನೀಡಿದರು. ಇದು ಎಲ್ಲಾ ಅಭ್ಯಾಸಿಗಳಿಗೂ ಒಂದು ಅನಿರೀಕ್ಷಿತ ಕೊಡುಗೆಯಾಗಿದ್ದಿತು.

ಮೇ 21–26ರ ತನಕ ಗುರುಗಳು ಗಾಯತ್ರಿಯಲ್ಲಿದ್ದು ಅಭ್ಯಾಸಿಗಳು ಅಲ್ಲಿಗೆ ಹೋಗದಂತೆ ಹೇಳಲಾಗಿತ್ತು. 26ರ ಮಧ್ಯಾಹ್ನ ಗುರುಗಳು ಹಿಂದಿರುಗಿದವರು ಮುಂಬೈನಿಂದ ಬಂದಿದ್ದ ಕೆಲ ಅಭ್ಯಾಸಿಗಳೊಡನೆ ಅಲ್ಲಿನ ಆಶ್ರಮದ ಯೋಜನೆ ವಿಷಯದಲ್ಲಿ ಕಾರ್ಯನಿರತರಾದರು.

## ಕರ್ನಾಟಕ ಮತ್ತು ಕೊಯಮತ್ತೂರ್ ಅಭ್ಯಾಸಿಗಳಿಗೆ ಕಾರ್ಯಾಗಾರ

27ರಂದು ಗುರುಗಳು ಕರ್ನಾಟಕದ ವಿವಿಧ ಕೇಂದ್ರಗಳಿಂದ ಹಾಗೂ ಕೊಯಮತ್ತೂರ್ ಕೇಂದ್ರ ಮತ್ತು ಚೆನ್ನೈ ಮತ್ತು ಸುತ್ತಮುತ್ತಲಿನಿಂದ ಬಂದಿದ್ದ ಒಟ್ಟು 600 ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು. ನಂತರ ಗುರುಗಳು ಡಾರ್ಮ್ ಎ ಗೆ ಹೋಗಿ ಅಲ್ಲಿ ನೆರೆದಿದ್ದ ಅಭ್ಯಾಸಿಗಳಿಗೆ ಭಾಷಣ ಮಾಡಿದರು. ಅವರು ಮುಖ್ಯವಾಗಿ ಪ್ರೇಮದ ಬಗ್ಗೆ ಒತ್ತು ನೀಡಿ "ಎಲರನ್ನೂ ಪ್ರೀತಿಸುವ ಅವರನ್ನು ನಾವು ಪ್ರೀತಿಸಲಾಗದಿದ್ದರೆ ಅವರು ಪ್ರೀತಿಸುವ ಎಲ್ಲರನ್ನು ನಾವು ಹೇಗೆ ಪ್ರೀತಿಸಲು ಸಾಧ್ಯ" ಎಂದರು. ಹಾಗೆಯೇ ವಿವಿಧ ಬಿಂದು ಮತ್ತು ವಲಯಗಳ ಬಗ್ಗೆ ಹೇಳುತ್ತ "ನಾವು ಅಲ್ಲಿಲ್ಲದಿದ್ದರೆ ಎಲ್ಲೂ ಇರಲು ಸಾಧ್ಯವಿಲ್ಲ. ನಾವು ಬಿಂದು ಮತ್ತು ವಲಯಗಳ ಕಡೆಗೆ ಮತ್ತು ಮಧ್ಯದಲ್ಲಿ ಬರುವ ಹಂತಗಳಿಗೆ ಹೆಚ್ಚಿನ ಗಮನ ನೀಡದೆ ನಮ್ಮ ಅಂತಿಮ ಗುರಿಯೆಡೆಗೆ ಮಾತ್ರ ಸಂಪೂರ್ಣ ಗಮನ ಕೊಡಬೇಕು" ಎಂದರು.






## ಗೋವಾದಿಂದ ಅಭ್ಯಾಸಿಗಳು

ಗುರುಗಳು ಮೇ 27ರಿಂದ 31ರ ವರೆಗೆ ಮತ್ತೆ ಗಾಯತ್ರಿಯಲ್ಲಿದ್ದರು. ಗೋವಾದಿಂದ ಬಂದ ಅಭ್ಯಾಸಿಗಳನ್ನು ಭೇಟಿಯಾಗಲು ಅವರು 31ರಂದು ಆಶ್ರಮಕ್ಕೆ ಬಂದರು. ಪೂರ್ವಾಹ್ನ 11ರ ಸುಮಾರಿಗೆ ಅವರು ಡಾರ್ಮ್ Aಗೆ ಬಂದರು. ಅಲ್ಲಿ ಸುಮಾರು ಇಪ್ಪತ್ತೈದು ಅಭ್ಯಾಸಿಗಳು ಮಾತ್ರ ಇದ್ದುದನ್ನು ಕಂಡು, ತಾನು ಸುಮಾರು 150ರಿಂದ 200 ಅಭ್ಯಾಸಿಗಳನ್ನಾದರೂ ಕಾಣುವೆನೆಂದು ಆಶಿಸುತ್ತಿದ್ದೆ ಎಂದರು. ಗುರುಗಳು ಒಂದು ಭಾಷಣವನ್ನಿತ್ತು ನಂತರ ಸತ್ಸಂಗವನ್ನು ನಡೆಸಿಕೊಟ್ಟರು. ಭಾಷಣದಲ್ಲಿ ಗುರುಗಳು, ಸಹಜಮಾರ್ಗವು ತೀರಾ ಸರಳ ಮತ್ತು ಪರಿಣಾಮಕಾರಿಯಾದ ಒಂದು ಸಾಧನಾಪದ್ಧತಿಯಾಗಿದ್ದು ಅಂಥ ಸರಳ ಪದ್ಧತಿಯನ್ನು ಪ್ರತಿಯೊಬ್ಬರಿಗೂ ವಿವರಿಸುವಲ್ಲಿ ಯಾವುದೇ ತೊಡಕಿರಬಾರದು ಎಂಬ ಅಂಶವನ್ನು ಒತ್ತಿಹೇಳಿದರು. ಸತ್ಸಂಗಾನಂತರ, ಗುರುಗಳು ಬಳಲಿದ್ದು ಸ್ಪಷ್ಟವಾಗಿತ್ತು ಮತ್ತು ಅವರು ನಿಧಾನವಾಗಿ ತಮ್ಮ ಕುಟೀರಕ್ಕೆ ಮರಳಿದರು.



ಮಧ್ಯಾಹ್ನ ಭೋಜನಾನಂತರ ಗುರುಗಳು ಒಮೆಗಾ ವಿದ್ಯಾಲಯದ ಹಳೇವಿದ್ಯಾರ್ಥಿ ಸಂಘದ ಕೆಲ ಸದಸ್ಯರನ್ನು ಭೇಟಿಯಾದರು. ತೀರಾ ಸಣ್ಣದೊಂದು ನಿಧಿಯಲ್ಲಿ ವ್ಯವಹರಿಸುತ್ತಿದ್ದರೂ, ದಾಖಲೆಗಳು, ಖರ್ಚುಗಳು, ರಶೀದಿ ಇತ್ಯಾದಿಗಳನ್ನು ಅವರು ಹೇಗೆ ಇರಿಸಬೇಕೆಂಬುದರಲ್ಲಿ ಗುರುಗಳು ವಿಶೇಷ ಆಸ್ಥೆ ವಹಿಸಿದ್ದರು. ಅದು ನಮ್ಮೆಲ್ಲರಿಗೆ, ಪ್ರಯತ್ನವು ಎಷ್ಟೇ ಸಣ್ಣದಾಗಿರಲಿ ಅಥವಾ ದೊಡ್ಡದಾಗಿರಲಿ, ಒಂದೇ ರೀತಿಯ ಪರಿಶ್ರಮವಿರಬೇಕು ಎಂಬ ಒಂದು ಪಾಠವಾಗಿತ್ತು.

## ಒಮೆಗಾ ಮುಂಚಿನ ವಿದ್ಯಾರ್ಥಿಗಳಿಗೆ ವಿಚಾರಸಂಕಿರಣ

ಜೂನ್ 1ರಂದು ಗುರುಗಳು ಗ್ರಂಥಾಲಯದ ಮೇಲಿರುವ ಸಭಾಭವನವನ್ನು ಉದ್ಘಾಟಿಸಿದರು. ಹಾಗೆಯೇ ಒಮೆಗಾ ವಿದ್ಯಾಲಯದಿಂದ ಉತ್ತೀರ್ಣರಾಗಿ ಹೊರಬಂದ ಎರಡು ತಂಡಗಳ ವಿದ್ಯಾರ್ಥಿಗಳಿಗಾಗಿ ಒಂದು ವಾರಾವಧಿಯ ವಿಚಾರ ಸಂಕಿರಣವನ್ನೂ ಉದ್ಘಾಟಿಸಿದರು. ಗುರುಗಳು ಅವರೊಂದಿಗೆ ಮಾತನಾಡಿ ಅವರಿಗೆಲ್ಲ ಒಂದು ಬೈಠಕ್ಕನ್ನು ನೀಡಿದರು. ಅಪರಾಹ್ನ ಗುರುಗಳು ಗಾಯತ್ರಿಗೆ ಹೊರಟರು. ಕಾನ್ಹಾ ಯೋಜನೆ ತುಂಬಾ ಚೆನ್ನಾಗಿ ಸಾಗುತ್ತಿದ್ದುದರಿಂದ ಮತ್ತು ನೋಂದಾವಣೆ ಕೆಲಸವನ್ನು ಸ್ವತಃ ತಾನೇ ಮಾಡಬೇಕೆಂದು ಗುರುಗಳು ಹೈದರಾಬಾದ್‌ಗೆ ಭೇಟಿನೀಡುವ ಯೋಜನೆಯನ್ನು ಹಾಕಿಕೊಂಡಿದ್ದರು. ಕೊನೆಯಲ್ಲಿ ತನ್ನ ಆರೋಗ್ಯ ನಿಮಿತ್ತವಾಗಿ ಅವರು ತನ್ನ ಪ್ರಯಾಣವನ್ನು ರದ್ದುಗೊಳಿಸಬೇಕಾಯಿತು.

ತನಗೆ ಹೈದರಾಬಾದ್‌ಗೆ ಹೋಗಲಾಗದ್ದರಿಂದ ಗುರುಗಳು ಕಾನ್ಹಾ ಯೋಜನೆಯ ಸ್ವಯಂಸೇವಕರನ್ನು ಜೂನ್ 6ರಂದು ಗಾಯತ್ರಿಗೆ ಆಮಂತ್ರಿಸಿ ಅವರೊಂದಿಗೆ ಸುದೀರ್ಘವಾದ ಸಭೆಯೊಂದನ್ನು ನಡೆಸಿದರು ಮತ್ತು ಅವರಿಗೆಲ್ಲ ಉಡುಗೊರೆಗಳನ್ನು ನೀಡಿ ಈ ಯೋಜನೆಯನ್ನು ಯಶಸ್ವಿ ಗೊಳಿಸುತ್ತಿರುವುದಕ್ಕಾಗಿ ಅವರನ್ನು ಅಭಿನಂದಿಸಿದರು.

ಜೂನ್ 8ರ ಶುಕ್ರವಾರ ಗುರುಗಳು ಸೋದರ ಎಮ್. ಡಿ. ಸಂತಾನಗೋಪಾಲಂರವರೊಡನೆ ಸುಮಾರು ಒಂದು ವಾರ ಉಳಿದುಕೊಳ್ಳಲೆಂದು ಅವರ ನಿವಾಸಕ್ಕೆ ತೆರಳಿದರು.

ಗುರುಗಳು ಜೂನ್ 14ರ ಗುರುವಾರ ಆಶ್ರಮಕ್ಕೆ ಮರಳಿದರು. ಮರುದಿನ ಅವರು ದಂತಚಿಕಿತ್ಸೆಯೊಂದಕ್ಕೆ ಒಳಗಾಗಬೇಕಾಗಿತ್ತು. ಅವರು ತುಂಬಾ ನೋವಿನಲ್ಲಿರುವುದನ್ನು ಕಾಣಬಹುದಾಗಿದ್ದು ಅವರ ಮುಖವು ಬಾತುಕೊಂಡಿತ್ತು.

## ಲಕ್ನೋದಿಂದ ಬಂದ ಅಭ್ಯಾಸಿಗಳಿಗಾಗಿ ವಿಚಾರಗೋಷ್ಠಿ

ಲಕ್ನೋದಿಂದ ಬಂದ ಸುಮಾರು 650 ಅಭ್ಯಾಸಿಗಳು ವಿಚಾರಗೋಷ್ಠಿಯೊಂದಕ್ಕಾಗಿ ಒಗ್ಗೂಡಿದ್ದರು. ಸೋದರ ಚಕ್ರಪಾಣಿಯವರು ಹಿಂದಿಯಲ್ಲಿ ಮಾತನಾಡಿ, ಪ್ರೇಮ ಮತ್ತು ಕಾತರತೆಯ ಭಾವವನ್ನೊಳಗೊಂಡ ಗೀತೆಗಳ ಸಾಲುಗಳಿಂದ ಹೆಣೆಯುತ್ತ ತೀರಾ ಸರಳವಾದ ರೀತಿಯಲ್ಲಿ ಸಂದೇಶವನ್ನು ವಿಶದಪಡಿಸಿದರು.

ಶನಿವಾರದಂದು ಗುರುಗಳು ಪ್ರಶಿಕ್ಷಕ ಬೈಠಕ್ಕೊಂದನ್ನು ಕೊಟ್ಟರು. ತದನಂತರ ಅವರು ಅಸ್ವಸ್ಥರಾಗಿ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕಾದ್ದರಿಂದ ಲಕ್ನೋ ಅಭ್ಯಾಸಿಗಳನ್ನು ಭೇಟಿಯಾಗಲು ಅವರಿಗೆ ಸಾಧ್ಯವಾಗಲಿಲ್ಲ. ಸೋದರ ವಿನೋದ್ ಮಿಶ್ರಾರವರು, 'ಗುರುಗಳನ್ನು ಎಲ್ಲ ಪರಿಸ್ಥಿತಿಗಳಲ್ಲೂ ಸಂತೋಷವಾಗಿರಿಸುವುದು ಹೇಗೆ?' ಎಂಬ ವಿಷಯದಲ್ಲಿ ಮಾತನಾಡಿದರು. ಮುಂದೆ ಗುರುಗಳು ಈ ವಿಷಯದ ಬಗ್ಗೆ ಮಾತನಾಡುತ್ತ, ನೀಡುವ ಮನೋಭಾವವನ್ನು, ಅಂದರೆ ಆಂತರಿಕಭಕ್ತಿಭಾವದಿಂದ ನೀಡಬೇಕಾಗುವ ಮನೋಭಾವವನ್ನು ಒತ್ತಿಹೇಳಿದರು.

ಸಾಯಂಕಾಲ ಗುರುಗಳು ಎರಡು ಸಭೆಗಳನ್ನು ನಡೆಸಿದರು. ಒಂದು, ಲಕ್ನೋ ಮತ್ತು ಇತರ ಕೇಂದ್ರಗಳಿಂದ ಬಂದ ಅಭ್ಯಾಸಿಗಳ ಮಕ್ಕಳೊಂದಿಗೆ ಮತ್ತು ಇನ್ನೊಂದು, ಆ ಕೇಂದ್ರಗಳ ಪ್ರಶಿಕ್ಷಕರೊಂದಿಗೆ ಆಗಿತ್ತು. ಸುಮಾರು ಎಂಭತ್ತು ಮಂದಿ ಮಕ್ಕಳು ಮತ್ತು ಹರೆಯದವರು ಗುರುಗಳನ್ನು ಭೇಟಿಯಾದರು. ಗುರುಗಳು ಅವರಿಗೆಲ್ಲ ಚಾಕೊಲೇಟ್‌ಗಳನ್ನು ಕೊಟ್ಟು ಅವರೊಂದಿಗೆ ಮಾತನಾಡಿದರು. ಅನಂತರ ಗುರುಗಳು ಲಕ್ನೋ ಕೇಂದ್ರದ ಸುಮಾರು 17 ಪ್ರಶಿಕ್ಷಕರಿಗೆ ಒಂದು ಬೈಠಕ್ ಕೊಟ್ಟರು.

ಗುರುಗಳು 17ರಂದು ಪ್ರಾತಃಕಾಲದ ಸತ್ಸಂಗವನ್ನು ನಡೆಸಿಕೊಟ್ಟರು. ಚೆನ್ನೈ ಅಭ್ಯಾಸಿಗಳ ದೊಡ್ಡ ಗುಂಪು ಅಲ್ಲಿತ್ತು. ಸಮೀಪದ ಕೆಲವು ಕೇಂದ್ರಗಳ ಮತ್ತು ಲಕ್ನೋ ಅಭ್ಯಾಸಿಗಳ ಗುಂಪು ಕೂಡಾ ದೊಡ್ಡದೇ ಇದ್ದು ಧ್ಯಾನಮಂದಿರ ತುಂಬಿಹೋಗುವಂತೆ ಮಾಡಿತ್ತು.




ಲಕ್ನೋದಿಂದ ಬಂದ ಅಭ್ಯಾಸಿಗಳನ್ನು ಹಿಂದಿನದಿನ ಭೇಟಿಯಾಗಲು ಸಾಧ್ಯವಾಗದ ಕಾರಣ ಪೂರ್ವಾಹ್ನ 11 ಗಂಟೆಗೆ ಅವರನ್ನು ಡಾರ್ಮ್ Aಯಲ್ಲಿ ಭೇಟಿಯಾಗಲು ಗುರುಗಳು ನಿರ್ಧರಿಸಿದರು. ಗುರುಗಳು ಹಿಂದಿಯಲ್ಲಿ ಒಂದು ಭಾಷಣವನ್ನಿತ್ತು, ಸರಿಯಾದವುಗಳನ್ನು ಭವಿಷ್ಯತ್ತಿಗೆ ಮುಂದೂಡದೆ ವರ್ತಮಾನದಲ್ಲಿ ಮಾಡುವ ಅಗತ್ಯ ಮತ್ತು ಪ್ರಾಮುಖ್ಯತೆಯನ್ನು ಒತ್ತಿಹೇಳಿದರು. ಅವರು ಮುಪ್ಪಾಗುವ ಅನಿವಾರ್ಯ ಪ್ರಕ್ರಿಯೆಯ ಬಗ್ಗೆ ಹೇಳುತ್ತ ಅಧ್ಯಾತ್ಮವನ್ನು ವೃದ್ಧರಾಗುವಾಗ ಅನ್ವೇಷಿಸಬಹುದು ಎಂದು ಯೋಚಿಸುವುದು ಹೇಗೆ ಒಂದು ಭ್ರಮೆಯಾಗುತ್ತದೆ ಎಂಬುದನ್ನು ತಿಳಿಯಪಡಿಸಿದರು. ಬಾಬೂಜಿಯವರು ವಿವೇಕದ ಬಗ್ಗೆ ಹೇಳಿರುವುದನ್ನು ಅವರು ಪುನರುಚ್ಚರಿಸಿ, ನಾವು ಮರುಕ್ಷಣವೇ ಸಾಯಲಿದ್ದೇವೆ ಎಂಬಂತೆ ಬದುಕುವುದು ವಿವೇಕ ಎಂದರು, ತನ್ನ ಭಾಷಣದ ನಂತರ ಗುರುಗಳು, ಎಲ್ಲರೂ ಪ್ರಾತಃಕಾಲ ಆಗತಾನೇ ಸತ್ಸಂಗ ಮುಗಿಸಿಬಂದಿರುವುದರಿಂದ, ತಾನು ಇನ್ನೊಂದು ಬೈಠಕ್ಕನ್ನು ಕೊಡಬೇಕೆ ಎಂದು ಕೇಳಿದರು. ಅಭ್ಯಾಸಿಗಳು ಬೈಠಕ್‌ಗಾಗಿ ಕೋರಿದರು. ಸೇರಿದ್ದ ಎಲ್ಲ ಅಭ್ಯಾಸಿಗಳು ಅಧಿವೇಶನವಿಡೀ ಶಿಸ್ತಿನಿಂದ ಮೌನವಾಗಿ ಕುಳಿತಿದ್ದು, ನೂಕು ನುಗ್ಗಲುಮಾಡದೆ ಗುರುಗಳು ಆರಾಮಾಗಿ ಓಡಾಡಲು ಅನುವು ಮಾಡಿಕೊಟ್ಟರು.

## ಗುರುಗಳು ಮತ್ತು ಅವರ ಕೆಲಸ

ಗುರುಗಳು, ಜುಆನ್ ಎನ್ರಿಕ್ವೆಜ಼್‌ರವರ 'ನಮ್ಮ ಮಕ್ಕಳು ವಿಭಿನ್ನ ಸಂತತಿಯಾಗುವರೆ?' ಎಂಬ ಶಿರೋನಾಮೆಯ ಅತ್ಯಂತ ಆಸಕ್ತಿದಾಯಕ ಮತ್ತು ವಿಚಾರಾತ್ಮಕವಾದ TED ಭಾಷಣವನ್ನು ಅತ್ಯಾಸಕ್ತಿಯಿಂದ ಆಲಿಸಿದರು ಮತ್ತು ಮಾನವನ ವಿಕಾಸದ ಬಗ್ಗೆ ಒಂದೆರಡು ಅಭಿಪ್ರಾಯಗಳನ್ನು ಹೇಳಿದರು.

ಗುರುಗಳಿಗೆ ಕೆಲ ವಾರಗಳಿಂದ ಬಲಭುಜದಲ್ಲಿ ನೋವಿದ್ದು ಪ್ರತಿದಿನ ಅವರು ಓರ್ವ ಭೌತಚಿಕಿತ್ಸಕರೊಬ್ಬರ ಮೇಲ್ವಿಚಾರಣೆಯಲ್ಲಿ, ಸೂಚಿಸಲ್ಪಟ್ಟ ವ್ಯಾಯಾಮಗಳಿಗೆ ತಾಳ್ಮೆಯಿಂದ ಒಳಗಾಗುತ್ತಾರೆ. ಅವರ ಸಾಮಾನ್ಯ ಚಟುವಟಿಕೆಗಳು ಎಲ್ಲ ಪರಿಸ್ಥಿತಿಗಳಲ್ಲೂ ಮುಂದುವರಿಯುತ್ತಿವೆ. ಹೊಸ ಪ್ರಶಿಕ್ಷಕರಿಗಾಗಿ ಅನೇಕ ಪ್ರಸ್ತಾಪಗಳು ಅವರ ಆರೋಗ್ಯದ ಕಾರಣದಿಂದಾಗಿ ಬಾಕಿ ಉಳಿದಿವೆ ಎಂದು ತಿಳಿಸಿದಾಗ ಅವರು, ಅವರಲ್ಲಿ ನಾಲ್ವರನ್ನು ಕೂಡಲೇ ಕರೆಸಲು ಹೇಳಿದರು.

ಗುರುಗಳು ಮಕ್ಕಳೊಂದಿಗೆ ಸಮಯ ಕಳೆಯುತ್ತಾರೆ ಮತ್ತು ಅವರಲ್ಲಿ ಒಬ್ಬನೆಂಬಂತೆ ಅವರೊಡನೆ ಖುಷಿಯಿಂದ ಮಾತನಾಡುತ್ತಾರೆ. ದಂಪತಿಯೊಂದು ತಮ್ಮ ನವಜಾತ ಶಿಶುವಿನೊಂದಿಗೆ ಬಂದು ಅದಕ್ಕೆ ಹೆಸರಿಡಬೇಕೆಂದು ಕೇಳಿದಾಗ, ಗುರುಗಳು ಸ್ವಲ್ಪ ಯೋಚಿಸಿ, 'ಸರಸ್ವತಿ' ಎಂದರು. ಅವರು ಮಗುವಿನೊಂದಿಗೆ ಮಾತನಾಡಿದರು, ಮಗು ಪ್ರತಿಸ್ಪಂದಿಸಿ, ಮಂದಹಾಸ ಸೂಸಿ ನಗಲಾರಂಭಿಸಿತು. ಅಭ್ಯಾಸಿಯೊಬ್ಬರು, "ಗುರುಗಳೇ, ಶಿಶುಗಳು ನಿಮ್ಮೊಂದಿಗೆ ಸಂವಹನ ನಡೆಸುತ್ತವೆಯೆ?" ಎಂದು ಕೇಳಿದಾಗ ಅವರು, "ಇಲ್ಲ, ಅವು ಸಂವಹನ ನಡೆಸುತ್ತಿಲ್ಲ, ಆದರೆ ಅವು ನನ್ನನ್ನು ಗುರುತಿಸಿದಾಗ ಮುಗುಳ್ನಗುತ್ತವೆ" ಎಂದರು. ಅವರನ್ನು ಮೊದಲ ಬಾರಿ ಭೇಟಿಯಾದಾಗ, ನಮ್ಮಲ್ಲೆಷ್ಟು ಮಂದಿ ಅವರೊಳಗಿರುವ ಸ್ವಾಮಿಯನ್ನು ಗುರುತಿಸಿದ್ದೇವೆ?

## ಯುವ ಕಾರ್ಯಕ್ರಮಗಳು



### ಪನ್ವೇಲ್

ಪನ್ವೇಲ್ ಆಶ್ರಮವು ಎಪ್ರಿಲ್ 20ರಿಂದ 22ರ ತನಕ 13–17ವಯೋಮಾನದ 45 ಮಕ್ಕಳಿಗೆ ಶಿಬಿರವೊಂದನ್ನು ಸಂಘಟಿಸಿತ್ತು. ಆಯ್ಕೆ ಮಾಡಲಾದ ವಿಷಯಗಳು ಈ ವಯಸ್ಸಿನ ಗುಂಪಿಗೆ ಸಂಬಂಧಿಸಿದ ವಾದವಿವಾರಗಳ ಮೇಲೆ ಕೇಂದ್ರೀಕೃತವಾಗಿದ್ದವು. ಶಿಬಿರವು ಪ್ರಾರ್ಥನಾ ಸಭೆಯೊಂದಿಗೆ ಪ್ರಾರಂಭವಾಯಿತು. ಅದರಲ್ಲಿ ಪ್ರತಿಯೊಂದು ಮಗುವನ್ನು, ಒಂದು ಮೊಂಬತ್ತಿಯನ್ನು ಹಚ್ಚಿ ಭಗವಂತನ ಕುರಿತು ತನ್ನ ಪರಿಕಲ್ಪನೆಯ ಬಗ್ಗೆ ಏನಾದರೂ ಹೇಳಲು ಕೇಳಲಾಯಿತು. ಗುಂಪುಗಳನ್ನು ಮಾಡಿ ಅವುಗಳಿಗೆ ಪ್ರಸಿದ್ಧ ವ್ಯಕ್ತಿಗಳು ಮತ್ತು ಅವರ ಮುಖ್ಯ ಗುಣದ ಹೆಸರುಗಳನ್ನಿಡಲಾಯಿತು. ಉದಾಹರಣೆಗೆ, 'ಮದರ್ ತೆರೆಸಾ–ಕಾಳಜಿ ಮೊಂಬತ್ತಿಗಳು', 'ಚಾರೀಜಿ ಗುರುಗಳು–ಪ್ರೇಮ ದೀಪಗಳು', 'ಅಬ್ರಹಾಂ ಲಿಂಕನ್–ನಂಬುಗೆಯ ದೀವಟಿಗೆ' ಹೀಗೆಲ್ಲ ಪ್ರತಿಯೊಂದು ಗುಂಪಿಗೂ ಒಂದು ಅಪೂರ್ಣ ಕಥೆಯನ್ನು ಕೊಡಲಾಗಿತ್ತು. ಅದನ್ನು ಅವರು ಸಂಪೂರ್ಣಗೊಳಿಸಿ, ಗೊಂಬೆಗಳು ಮತ್ತು ಮುಖವಾಡಗಳೊಂದಿಗೆ ಅಭಿನಯಿಸಿ ತೋರಿಸಬೇಕಾಗಿತ್ತು. ಸಾಮರಸ್ಯ, ನಿರ್ವಹಣೆ, ಆರೋಗ್ಯ ಮತ್ತು ಪೋಷಣೆ, ಶಕ್ತಿ ಮತ್ತು ಉತ್ಸಾಹ ಇಂತಹ ವಿಷಯಗಳ ಮೇಲೆ ವಿಚಾರ–ವಿನಿಮಯ ಅಧಿವೇಶನಗಳಿದ್ದು ಅವನ್ನು ಆಯಾ ಕ್ಷೇತ್ರಗಳ ವೃತ್ತಿಪರ ಅಭ್ಯಾಸಿಗಳು ನಿರ್ವಹಿಸಿದರು. ಛಾಯಾಗ್ರಹಣದ ಒಂದು ಅಧಿವೇಶನವು ಆಶ್ರಮದ ಹಸಿರು ಆಚ್ಛಾದಿತ ವಲಯದಲ್ಲಿ ಮಕ್ಕಳು ಅದ್ಭುತ ಛಾಯಾಚಿತ್ರಗಳನ್ನು ತೆಗೆಯುವಂತೆ ಮಾಡಿತ್ತು. 'ನಿಧಿಶೋಧನೆಯು' ಮಕ್ಕಳಿಗೆ ಖುಷಿ ಕೊಟ್ಟಿತ್ತು. ಭಾಗವಹಿಸಿದವರಿಗೆ ಸ್ಮರಣಿಕೆಯಾಗಿ ಸಮೂಹಛಾಯಾಚಿತ್ರದ ಪ್ರತಿಯನ್ನು ಕೊಡಲಾಯಿತು.

### ಮಣಪಾಕ್ಕಂ, ಚೆನ್ನೈ

ಮಣಪಾಕ್ಕಂನಲ್ಲಿ ಮೇ 27ರಂದು 17ರಿಂದ 30ರ ವಯೋಮಾನದ ಹರೆಯದವರಿಗಾಗಿ 'ಸರಳವಾಗಿರಿ ಮತ್ತು ಪ್ರಕೃತಿಯೊಂದಿಗೆ ಸಮರಸವಾಗಿರಿ' ಎಂಬ ವಿಷಯದ ಕಾರ್ಯಕ್ರಮವೊಂದು ವೃಕ್ಷರಕ್ಷಣೆಗಾಗಿ ಕೆಲಸ ಮಾಡುತ್ತಿರುವ ಸ್ಥಳೀಯ NGOದಿಂದ ಸಂಘಟಿಸಲ್ಪಟ್ಟಿತ್ತು. ಸುಮಾರು ಐವತ್ತು ಮಂದಿ ಯುವಕರು ಇದರಲ್ಲಿ ಭಾಗವಹಿಸಿದ್ದು ಇದು ಆಶ್ರಮದ ಸುತ್ತ 'ಪ್ರಕೃತಿ ನಡಿಗೆ'ಯೊಂದಿಗೆ ಆರಂಭವಾಯಿತು. ಭಾಗವಹಿಸಿದವರು ಆಶ್ರಮದಲ್ಲಿರುವ ವಿವಿಧ ವೃಕ್ಷಗಳ ಪರಿಚಯಮಾಡಿಕೊಂಡು ಅವುಗಳ ಪ್ರಾಮುಖ್ಯತೆಯನ್ನು ತಿಳಿದುಕೊಂಡರು. ಸರಳವಾಗಿರುವುದರ ಮಹತ್ವವನ್ನು ಪ್ರತಿಪಾದಿಸುವ ಭಾಷಣವೊಂದನ್ನು ಪ್ರಸ್ತುತಪಡಿಸಲಾಯಿತು ಮತ್ತು ಈ ವಿಷಯದ ಮೇಲೆ ಗುರುಗಳಿತ್ತ ಅಭಿಪ್ರಾಯಗಳನ್ನೂ ಹಂಚಿಕೊಳ್ಳಲಾಯಿತು. ನಾಲ್ಕನೇ ನಿಯಮದ ಮೇಲೆ ಗುಂಪು ಪಠನ ಮತ್ತು ಚರ್ಚೆಯೊಂದನ್ನು ಏರ್ಪಡಿಸಲಾಯಿತು. ಕಾರ್ಯಕ್ರಮವು ಪರಸ್ಪರ ಪ್ರತಿವರ್ತನಾತ್ಮಕ, ಪ್ರಾಯೋಗಿಕ ಮತ್ತು ಉಪಯುಕ್ತವಾಗಿತ್ತು.

## ಬನಶಂಕರಿ ಆಶ್ರಮ, ಬೆಂಗಳೂರು



ಬೆಂಗಳೂರಿನ ಯುವ ಅಭ್ಯಾಸಿಗಳನ್ನು ಒಟ್ಟುಸೇರಿಸುವ ಸತತ ಪ್ರಯತ್ನವೊಂದರಲ್ಲಿ 2012ರ ಜನವರಿಯಲ್ಲಿ ಅನೌಪಚಾರಿಕ ಸಭೆಗಳು ಪ್ರಾರಂಭವಾಗಿದ್ದವು. ತಿಂಗಳಿಗೊಮ್ಮೆ ಒಂದು ರವಿವಾರ, ಎರಡು ಗಂಟೆಗಳಕಾಲ ಸಭೆಗಳು ನಡೆಯುತ್ತಿದ್ದು ಸಂಖ್ಯೆ ನಿಧಾನವಾಗಿ ಆದರೆ ಖಂಡಿತವಾಗಿ ಹೆಚ್ಚುತ್ತಿದೆ. ಈ ಅಧಿವೇಶನಗಳ ಉದ್ದೇಶವು ಈ ಗುಂಪನ್ನು ಮಿಷನ್‌ನ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮತ್ತು ಗುರಿಯೆಡೆಗಿನ ಈ ಪಯಣದಲ್ಲಿ ಪರಸ್ಪರರಿಂದ ಕಲಿಯುವಂತೆ ಪ್ರೇರೇಪಿಸುವುದೇ ಆಗಿದೆ.

ಪ್ರತಿ ಅಧಿವೇಶನಕ್ಕಾಗಿ ಆರಿಸಿಕೊಂಡ ಆರಿಸಿಕೊಂಡ ವಿಷಯಗಳು ಸಾಧನೆಯ ಮೇಲಿರದೆ 'ನಾನೇಕೆ ಸಹಜಮಾರ್ಗದಲ್ಲಿದ್ದೇನೆ?', 'ನಾನು ಏನು?' ಮತ್ತು 'ಇರುವಿಕೆಯಿಂದ ಆಗುವಿಕೆಗೆ' ಇಂಥ ಇತರ ಅಂಶಗಳಾಗಿದ್ದವು. ಪ್ರತಿ ಅಧಿವೇಶನದಲ್ಲಿ ನಾವು ಕಲೆ, ಸಂಗೀತ, ಕಾವ್ಯ, ನಾಟಕ ಇತ್ಯಾದಿಗಳಲ್ಲಿ ಹೊಸದೇನಾದರೂ ಕಲಿಯುಬಹುದಾಗಿರುವಂಥದನ್ನು ಸೇರಿಸಲೂ ಯತ್ನಿಸುತ್ತೇವೆ. ವಿಷಯದ ಮೇಲಿನ ಅಂತರಾವಲೋಕನ ಮತ್ತು ಚರ್ಚೆಗಳಲ್ಲದೆ ಭಾಗವಹಿಸಿದವರನ್ನು ಒಂದು ಗುಂಪಿನ ಬಂಧದಲ್ಲಿರಿಸಲು ಸಹಾಯಕವಾಗುವ, ಖುಷಿ ಮತ್ತು ಅನ್ಯೋನ್ಯತೆಯ ಭಾವವನ್ನುಂಟುಮಾಡುವ ಆಟಗಳು ಮತ್ತು ಚಟುವಟಿಕೆಗಳನ್ನೂ ಸೇರಿಸಿಕೊಳ್ಳಲಾಗಿದೆ. ಪ್ರತಿ ಅಧಿವೇಶನವು ವಿಷಯದ ಮೇಲಿನ ಗುರುಗಳ ಭಾಷಣ/ವೀಡಿಯೊದಿಂದ ಕೊನೆಗೊಳ್ಳುತ್ತಿದ್ದು ವಿಷಯಸ್ಪಷ್ಟತೆಯನ್ನು ಕೊಡುತ್ತ ವಿಚಾರಗಳನ್ನು ಪುಷ್ಟೀಕರಿಸುತ್ತದೆ. ಮುಂಬರುವ ತಿಂಗಳುಗಳಿಗಾಗಿ ಸನಿವಾಸ ಶಿಬಿರ, ಪಕ್ಕದ ಇನ್ನೊಂದು ಕೇಂದ್ರಕ್ಕೆ ಭೇಟಿ, ನಾಟಕ ನಿರ್ಮಾಣ, ಛಾಯಾಚಿತ್ರ ಸ್ಪರ್ಧೆ ಇತ್ಯಾದಿ ಇನ್ನಷ್ಟು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಗುಂಪು ಗುರುಗಳ ಮಾರ್ಗದರ್ಶನದಲ್ಲಿ ಬೆಳೆಯುವುದು ಮತ್ತು ತಮ್ಮ ಸೋದರ ಸೋದರಿಯರ ಬೆಂಬಲದೊಂದಿಗೆ, ವಿದ್ಯಾಲಯ ಅಥವಾ ಕೆಲಸಗಳ ಒತ್ತಡಗಳನ್ನು ನಿಭಾಯಿಸಲು ಶಕ್ತವಾಗುವುದು ಎಂದು ಆಶಿಸುತ್ತೇವೆ.





## ಮಹಾರಾಷ್ಟ್ರ

ಯುವಕರ ಗಮನವನ್ನು ಆಧ್ಯಾತ್ಮಿಕ ಸಾಧನೆಯ ಪ್ರಾಮುಖ್ಯತೆಯತ್ತ ಮರುಕೇಂದ್ರೀಕರಿಸುವ ಉದ್ದೇಶದಿಂದ ಮುಂಬೈನ ಪನ್ವೇಲ್ ಆಶ್ರಮದಲ್ಲಿ ಎಪ್ರಿಲ್ 14 ಮತ್ತು 15ರಂದು ಎರಡುದಿನದ ಕಾರ್ಯಕ್ರಮವೊಂದನ್ನು ಸಂಘಟಿಸಲಾಗಿದ್ದು ಅದರಲ್ಲಿ ಮುಂಬೈ, ಪುಣೆ ಮತ್ತು ನಾಸಿಕ್ ಕೇಂದ್ರಗಳ ಸುಮಾರು 78 ಅಭ್ಯಾಸಿಗಳು ಪಾಲ್ಗೊಂಡರು. 'ಗುರುಗಳ ರೀತಿಗಳನ್ನು ಅನುಸರಿಸುವುದು' ಈ ವಿಚಾರಸಂಕಿರಣದ ವಿಷಯವಾಗಿದ್ದು ಅದರಲ್ಲಿ ಮೂರು ಅಧಿವೇಶನಗಳಿದ್ದುವು. ಅವೆಂದರೆ, 'ನಾನು ಏನು ಮಾಡಬೇಕು?', 'ನಾನು ಹೇಗೆ ವರ್ತಿಸಬೇಕು?', 'ನಾನು ಒಳಗಿನಿಂದ ಹೇಗಿರಬೇಕು?' ಎಂಬೀ ಮೂರು ಪ್ರಶ್ನೆಗಳಿಗೆ ಉತ್ತರಿಸುವುದೇ ಆಗಿದ್ದು ಇದರಲ್ಲಿ ಸಾಧನೆ, ಚಾರಿತ್ರ್ಯ ನಿರ್ಮಾಣ ಮತ್ತು ಮನೋಭಾವ ಮತ್ತು ಬದಲಾವಣೆಯ ಮೇಲಿನ ವಿಷಯಗಳು ಸೇರಿಕೊಂಡಿವೆ. ಇದನ್ನು ಅನುಸರಿಸಿ 10 ನಿಯಮಗಳ ಮೇಲೆ, ತೆರೆದುಕೊಳ್ಳುವ ಚಟುವಟಿಕೆಯೊಂದಿತ್ತು. ಸೌಲಭ್ಯಕಾರರೊಬ್ಬರು ಮಿಷನ್‌ನಲ್ಲಿ ಸ್ವಯಂಸೇವಾ ಕಾರ್ಯದ ಪ್ರಾಮುಖ್ಯತೆಯನ್ನು ಸಂಕ್ಷಿಪ್ತವಾಗಿ ತಿಳಿಸಿದರು. ಎರಡನೇ ದಿನ ಪ್ರಶ್ನೋತ್ತರ ಕಾರ್ಯಕ್ರಮವೊಂದಿದ್ದು ಅದರಲ್ಲಿ ಸಾಧನೆಯ ಮೂಲತತ್ವಗಳು, ನಿತ್ಯಸಾಧನೆ ಮತ್ತು ಅನುಭವಗಳು ಮುಂತಾದವುಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಅನುಭವಿ ಅಭ್ಯಾಸಿಗಳು, ಪ್ರಶಿಕ್ಷಕರು, ಅಧಿಕಾರಿಗಳು ಮತ್ತು ಸೌಲಭ್ಯಕಾರರಿದ್ದ ತಂಡವೊಂದು ಉತ್ತರಿಸಿತು. ಯುವಕರ ಅನೇಕಾನೇಕ ಸಂದೇಹಗಳು ನಿವಾರಣೆಯಾದವು. ಮನೋಭಾವ ಮತ್ತು ಬದಲಾವಣೆ ವಿಷಯದ ಮೇಲಿನ ಪ್ರಸ್ತುತಿಯ ನಂತರ ಅಲ್ಲಿ ತುಂಬ ಖುಷಿಕೊಡುವ ಚಟುವಟಿಕೆಗಳಿದ್ದವು. ಪುಣೆಯ ಸೋದರ ಅಮೋಲ್‌ರವರು 'ಧ್ಯಾನದ' ಮೇಲಿನ 2ಡಿ ವೀಡಿಯೊತುಣುಕೊಂದನ್ನು(ಅನಿಮೇಟೆಡ್) ಪ್ರಸ್ತುತಪಡಿಸಿದರು. ಸಹಜಮಾರ್ಗ ಪುಸ್ತಕಗಳ ನೋಟವೊಂದನ್ನು ಕೊಡುವ ಪ್ರಸ್ತುತಿಯೊಂದರ ಬಳಿಕ ಕೆಲ ಭಜನೆಗಳಿದ್ದವು.

## ನೊಯ್ಡಾ

ನೋಯ್ಡಾ ಕೇಂದ್ರದ ಯುವತಂಡವು ಮೇ ಮತ್ತು ಜೂನ್ ತಿಂಗಳುಗಳಲ್ಲಿ 6–11ರ ವಯೋಮಾನದ ಮಕ್ಕಳಿಗಾಗಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡಿತ್ತು. ತಂಡವು ಸುಮಾರು 60 ಮಕ್ಕಳಿಗೆ ಎರಡುವಾರಗಳ ಬೇಸಗೆತರಗತಿಗಳನ್ನು ಏರ್ಪಡಿಸಿತ್ತು. ಈ ತರಗತಿಗಳು 'ಸ್ನೇಹ', 'ಹಂಚಿಕೊಳ್ಳುವಿಕೆ', 'ಸಹಕಾರ', 'ಆಲಿಸುವ ಕಲೆ' ಇತ್ಯಾದಿ ಘಟಕಗಳನ್ನು ಒಳಗೊಂಡಿದ್ದವು. ತಂಡವು 6ರಿಂದ 10ನೇ ದರ್ಜೆಯವರಿಗೆ ತರಗತಿಗಳನ್ನು ಏರ್ಪಡಿಸುವ ಯೋಜನೆಯನ್ನು ಹಾಕಿಕೊಂಡಿದೆ ಮತ್ತು ಆಧ್ಯಾತ್ಮಿಕ ಮೌಲ್ಯಾಧಾರಿತ ತರಗತಿಗಳನ್ನು ನಡೆಸುವ ಪ್ರಸ್ತಾವದೊಂದಿಗೆ ಶಾಲೆಗಳತ್ತ ಹೋಗಲು ಯೋಜಿಸುತ್ತಿದೆ.

# ಮಕ್ಕಳಿಗಾಗಿ ಬೇಸಿಗೆ ಶಿಬಿರಗಳು





## ಮಣಪ್ಪಾಕ್ಕಂ, ಚೆನ್ನೈ

7ರಿಂದ 13ನೇ ವಯೋಮಾನದೊಳಗಿನ 120 ಮಕ್ಕಳು ಮಣಪ್ಪಾಕ್ಕಂನಲ್ಲಿ ಒಟ್ಟುಗೂಡಿದ್ದರು. ಮೊದಲನೆಯ ದಿನದಂದು ಅನೇಕ ಚಟುವಟಿಕೆಗಳು, ಕರಕುಶಲ ತರಗತಿ ಹಾಗೂ 'ಪ್ರೇಮದಲ್ಲಿ ಶಿಸ್ತು' ವಿಷಯದ ಮೇಲೆ ಕ್ರೀಡೆಗಳನ್ನು ಆಯೋಜಿಸಲಾಗಿತ್ತು. ಮೌಲ್ಯಾಧಾರಿತ ಚಲನಚಿತ್ರವೊಂದನ್ನು ಮಕ್ಕಳಿಗಾಗಿ ಪ್ರದರ್ಶಿಸಲಾಯಿತು.

'ಸರಳತೆ ಮತ್ತು ಸೂಕ್ಷ್ಮತೆ'ಯು ಎರಡನೇ ದಿನದ ವಿಷಯವಾಗಿತ್ತು. ಕರಕುಶಲ ತರಬೇತಿ, ಶೈಕ್ಷಣಿಕ ಮತ್ತು ಸ್ಪಂದನಭರಿತ ರಸಪ್ರಶ್ನೆ ಕಾರ್ಯಕ್ರಮ ಹಾಗೂ ಕುಂಬಾರಿಕೆಯೊಂದಿಗೆ ಮಕ್ಕಳು ವ್ಯಸ್ತವಾಗಿದ್ದರು.

ಮೂರನೇ ದಿನದ ವಿಷಯವು 'ಆರೋಗ್ಯ ಮತ್ತು ಪ್ರಕೃತಿಯೊಂದಿಗೆ ಸಮರಸ'ವಾಗಿದ್ದಿತು. 'ಶರೀರರಚನೆಯ ನಕ್ಷೆ'ಯ ಮೇಲೆ ಸಾಕ್ಷ್ಯಚಿತ್ರ, ಟಿ-ಶರ್ಟ್ ಚಿತ್ರಕಲೆ, ಬೊಂಬೆಯಾಟ ಮತ್ತು ನಿಧಿಶೋಧನ ಕಾರ್ಯಕ್ರಮಗಳು ಸಂತೋಷ ಎಲ್ಲರಿಗೂ ನೀಡಿದವು. ಶಿಬಿರದಲ್ಲಿ ತಯಾರಿಸಲಾದ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಮುಂದುವರೆದ ಕಾರ್ಯಕ್ರಮದ ಅಂಗವಾಗಿ ಸ್ಥಳೀಯ ಎನ್‌ಜಿಓವೊಂದು ಏರ್ಪಡಿಸಿದ್ದ 'ವೃಕ್ಷ ನಡೆ'ಯಲ್ಲಿ ಮಕ್ಕಳು ಭಾಗವಹಿಸಿ ಆಶ್ರಮದ ವಿವಿಧ ಗಿಡಮರಗಳ ಪರಿಚಯ ಮಾಡಿಕೊಂಡರು. ಮಕ್ಕಳು ಹಾಗೂ ಪಾಲಕರಿಂದ ಗುಣಾತ್ಮಕ ಮತ್ತು ಪ್ರೇರಣಾದಾಯಕ ಪ್ರತಿಕ್ರಿಯೆಯು ದೊರೆಯಿತು.

## ವಡೋದರಾ

ಮೇ 26, 2012ರ ಶನಿವಾರದಂದು ವಡೋದರಾ ಕೇಂದ್ರದಲ್ಲಿ ಒಂದು ದಿನದ ಮಕ್ಕಳ ಶಿಬಿರವನ್ನು ಆಯೋಜಿಸಲಾಗಿತ್ತು. ಒಟ್ಟು ಅರವತ್ತು ಮಕ್ಕಳು ಭಾಗವಹಿಸಿದ್ದರು. ಕಾರ್ಯಕ್ರಮವು ಲಾಲಾಜಿ ಹಾಗೂ ಬಾಬೂಜಿ ಮಹಾರಾಜರ ಆಧಾರಿತ ಪ್ರಸ್ತುತಿಗಳು, ಹಾಡುಗಳು, ಕಥೆಗಳು ಮತ್ತು ಆಟೋಟಗಳಿಂದ ಕೂಡಿತ್ತು. ಮೌಲ್ಯಗಳನ್ನು ಕಲಿಸುವಂತಹ ಚಟುವಟಿಕೆಗಳಿಂದ ಮಕ್ಕಳು ಲಾಭ ಹೊಂದಿದರು.



## ಪನ್ವೇಲ್, ಮುಂಬೈ

8 ರಿಂದ 12ರ ವಯೋಮಾನದ ಮಕ್ಕಳಿಗಾಗಿ ಮೇ 25-27ರಂದು ನಡೆದ ಶಿಬಿರದಲ್ಲಿ ಇಪ್ಪತ್ತು ಮಕ್ಕಳು ಭಾಗವಹಿಸಿದರು. ಮಕ್ಕಳನ್ನು ಮೂರು ಭಾಗಗಳಾಗಿ ವಿಂಗಡಿಸಿ ನೀಡಿದ ವಿಷಯಗಳನ್ನು ಅವರು ಮೂರನೇ ದಿನದಂದು ನಟಿಸಿ ತೋರಿಸಿದರು. 'ಪ್ರಕೃತಿ'ಯ ಕುರಿತು ಕೊಲಾಜ್ ಚಿತ್ರಗಳನ್ನು ರಚಿಸಿದರು. ಸಂಗೀತ ವಿಭಾಗದಲ್ಲಿ ಅವರಲ್ಲೇ ಕೆಲವರು ರಚಿಸಿದ ಹಾಡನ್ನು ಕಲಿತು ಹಾಡಿದರು. ಗಗನ ವೀಕ್ಷಣೆಯು ಎಲ್ಲರಿಗೂ ಪ್ರಿಯವಾಗಿತ್ತು. ವೃತ್ತಿನಿರತರಿಂದ ತರಬೇತಿ ಪಡೆದ ಮಕ್ಕಳು ಗೋಡೆಯೊಂದನ್ನು ಹಗ್ಗದ ಸಹಾಯದಿಂದ ಇಳಿಯುವ ಸಾಹಸ ಕೈಗೊಂಡರು. ಸಾಮೂಹಿಕ ಶ್ರಮ, ನವೀನ ಕಲ್ಪನೆಗಳಿಂದ ಕೂಡಿದ ಅನೇಕ ಆಟಗಳನ್ನು ಆಡಿ ಮೋಜು ಮಾಡಿದರು. ಕರಕುಶಲ ಭಾಗದಲ್ಲಿ ಮಕ್ಕಳು ತಯಾರಿಸಿದ ವರ್ಣರಂಜಿತ ಚೌಕಟ್ಟಿನಲ್ಲಿ ಅವರ ಸಾಮೂಹಿಕ ಭಾವಚಿತ್ರವನ್ನು ಅಂಟಿಸಿ ಸ್ಮರಣಿಕೆಯಂತೆ ನೀಡಲಾಯಿತು. 'ಶಕ್ತಿ' ಕುರಿತು ರಸಪ್ರಶ್ನೆ ನಡೆಸಲಾಯಿತು. ಎಳೆಯ ಮುಗ್ಧ ಮನಗಳ ಆರೈಕೆಯಲ್ಲಿ ಆಶ್ರಮವಿಡೀ ವಿಶೇಷ ವಾತಾವರಣದಿಂದ ತುಂಬಿತ್ತು.

## ಪಿಲಿಭಿತ್

ಪಿಲಿಭಿತ್ ಕೇಂದ್ರವು 25 ಮೇ-ಜೂನ್ 3ರವರೆಗೆ ಹತ್ತು ದಿನಗಳ ಕಾಲ ಬೆಳಿಗ್ಗೆ 6.30ರಿಂದ 9.30ರವರೆಗಿನ ತರಗತಿಗಳೊಂದಿಗೆ ಆಯೋಜಿಸಿದ ಶಿಬಿರದಲ್ಲಿ 10-14ವಯಸ್ಸಿನ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡರು. ಕಾರ್ಯಕ್ರಮವು ಶೈಕ್ಷಣಿಕ, ಪ್ರೇರಣಾತ್ಮಕ ಹಾಗೂ ಉಲ್ಲಾಸದಿಂದ ಕೂಡಿತ್ತು. ನೈತಿಕ ಮೌಲ್ಯಗಳ ಆಧಾರಿತ ಅನೇಕ ಚಟುವಟಿಕೆಗಳೊಂದಿಗೆ ಆಟಗಳು, ಚಿತ್ರಕಲೆ ಮತ್ತು ಪ್ರಬಂಧ ಬರವಣಿಗೆಗಳೂ ಸೇರಿದ್ದವು.

ಕೊನೆಯ ದಿನದಂದು, ಪಾಲಕ-ಪೋಷಕರಿಗಾಗಿ ಮುಕ್ತಸಭೆಯೊಂದನ್ನು ಆಯೋಜಿಸಲಾಗಿತ್ತು. ಭಾಗಿಗಳು ಶಿಬಿರದ ನಂತರ ತಮ್ಮ ಮಕ್ಕಳಲ್ಲಿ ಕಂಡುಬಂದ ಬದಲಾವಣೆಗಾಗಿ ಹರ್ಷ ವ್ಯಕ್ತಪಡಿಸಿದರು.

# ಪ್ರಕಟಣೆಗಳು

## ಗುರುಗಳ 86ನೇ ಹುಟ್ಟುಹಬ್ಬ ಆಚರಣೆ

ಡೈಮಂಡ್ ಜುಬಿಲಿ ಪಾರ್ಕ್, ತಿರುಪ್ಪೂರು(ತಮಿಳುನಾಡು)ನಲ್ಲಿ ಜುಲೈ 23ರಿಂದ 25ರವರೆಗೆ ನಡೆಯಲಿರುವ ಉತ್ಸವದಲ್ಲಿ ಭಾಗವಹಿಸಲು ಅಭ್ಯಾಸಿಗಳೆಲ್ಲರನ್ನೂ ಆಮಂತ್ರಿಸಲಾಗಿದೆ.

## ನವೀನ ವಲಯ ಮುಖ್ಯಸ್ಥರ ನೇಮಕಾತಿ

ವಲಯ 2ಎ–ತಮಿಳುನಾಡು ಉತ್ತರ

ಸೋ. ಬಿ.ಎಸ್.ಮುರುಗನ್‌ರವರು [ಹೊಸೂರಿನಿಂದ] ಸೋ.ಎಸ್.ಪ್ರಕಾಶ್‌ರವರ ಸ್ಥಾನಗ್ರಹಣ ಮಾಡಿರುತ್ತಾರೆ.

## ವಲಯ 8– ಮಧ್ಯಪ್ರದೇಶ

ಸೋ. ಪ್ರಭಾಕರ್ ದಾಸ್‌ರವರು[ಭೋಪಾಲ್‌ನಿಂದ] ಸೋ.ವಿಕಲ್ಪ್ ಮುಂಡ್ರಾರವರ ಸ್ಥಾನಗ್ರಹಣ ಮಾಡಿರುತ್ತಾರೆ.

## ವಲಯ 12ಬಿ–ಮಧ್ಯ ಉಪ್ರ

ಸೋ.ಅಶೋಕ್ ಗರ್ಗ್‌ರವರು [ಲಖನೌನಿಂದ] ಸೋ. ಶ್ಯಾಮ್‌ಜಿ ಮೆಹ್ರೋತ್ರರ ಬದಲು ಅಧಿಕಾರ ವಹಿಸಿಕೊಂಡಿರುತ್ತಾರೆ.

## ಕ್ರೆಸ್ಟ್ ರಿಟ್ರೀಟ್ ಕೇಂದ್ರ, ಪನ್‌ಶೆತ್

ಜೂನ್ 15, 2012ರಿಂದ ಸೋ.ಡಾ.ರಾಜೇಂದ್ರ ರಾಥೋಡ್‌ರವರು ಸೋ. ಕೆ.ಟಿ.ಮಂಜುನಾಥ್‌ರ ಬದಲು ನಿರ್ವಾಹಕರಾಗಿ ನೇಮಕಗೊಂಡಿದ್ದಾರೆ.

## ಕ್ರೆಸ್ಟ್, ಬೆಂಗಳೂರು

ಸೋ. ಸೀತಾ ಕುಂಚಿತಪಾದಂರವರು ಮೇ 2012ರಿಂದ ಸೋ. ಪೆರುಮಾಳ್‌ರವರ ಬದಲು ನಿರ್ದೇಶಕರಾಗಿ ವಹಿಸಿಕೊಂಡಿದ್ದಾರೆ.

## ಪುಲ್‌ಗಾಂವ್ ಆಶ್ರಮದ ಉದ್ಘಾಟನೆ

ಮಹಾರಾಷ್ಟ್ರದ ಪುಲ್‌ಗಾಂವ್ ಆಶ್ರಮವನ್ನು ಗುರುಗಳು ವಿಡಿಯೋ ಮೂಲಕ ಏಪ್ರಿಲ್ 22ರಂದು ಉದ್ಘಾಟಿಸಿದ ನಂತರ ಆಶ್ರಮದಲ್ಲಿ ಹಾಜರಿದ್ದ ಅಭ್ಯಾಸಿಗಳಿಗಾಗಿ ಸತ್ಸಂಗವನ್ನು ನಡೆಸಿಕೊಟ್ಟರು. ವಲಯ ಮುಖ್ಯಸ್ಥ ಸೋ.ವೈದ್ಯರೊಡನೆ ಕೆಲವು ಅಭ್ಯಾಸಿಗಳು ಮಣಪ್ಪಾಕ್ಕಂನಲ್ಲಿ ಗುರುಗಳೊಂದಿಗಿದ್ದರು.

ಪುಲ್‌ಗಾಂವ್ ಆಶ್ರಮವು ಒಟ್ಟು 10494 ಚ.ಅಡಿಯ ವಿಸ್ತೀರ್ಣ ಹೊಂದಿದ್ದು ಪುಟ್ಟದಾದರೂ ಸುಂದರವಾಗಿದೆ. 2290ಚ.ಅಡಿಯ ಧ್ಯಾನಮಂದಿರವು 300 ಅಭ್ಯಾಸಿಗಳಿಗಾಗಿ ಸ್ಥಳ ನೀಡಿದೆ. ಪುಸ್ತಕಭಂಡಾರ, ಪಾಕಶಾಲೆ, ಸೇವಾ ವಿಭಾಗ, ಶೌಚಾಲಯಗಳ ಸೌಲಭ್ಯವನ್ನು ಹೊಂದಿದೆ. ಕಾರ್ಯಕ್ರಮದಲ್ಲಿ ಪುಲ್ಗಾಂವ್, ಅಮರಾವತಿ, ವಾರ್ಧಾ, ಯೋಟ್ಮಲ್, ಚಂದ್ರಪುರ್ ಮತ್ತು ನಾಗ್ಪುರ ಕೇಂದ್ರಗಳ 200ಕ್ಕೂ ಅಧಿಕ ಅಭ್ಯಾಸಿಗಳು ಪಾಲ್ಗೊಂಡರು. ಗುರುಗಳು ಅಭ್ಯಾ ಸಿಗಳ ಅಧ್ಯಾತ್ಮಿಕ ಪ್ರಗತಿಗಾಗಿ ಅಗತ್ಯವಾದದ್ದನ್ನೆಲ್ಲಾ ನೀಡಿ ತಮ್ಮ ಪ್ರೇಮದಿಂದ ಅವರ ಹೃದಯಗಳನ್ನು ತುಂಬುತ್ತಾರೆ.



"ಸ್ಮರಣೆಯು ಪ್ರೇಮಿಯನ್ನು ಪ್ರಿಯನ ಸಮೀಪ ತರುತ್ತದೆ. ಈ ಸಾನ್ನಿಧ್ಯಕ್ಕೆ ಸೀಮೆಯಿಲ್ಲ. ಪ್ರೇಮ ಅಥವಾ ಒಲವು ಹೆಚ್ಚಾದಷ್ಟೂ ಅವನ ಕಡೆಗೆ ಮುನ್ನಡೆಯಾಗುತ್ತದೆ. ಈ ಸಂಬಂಧವು ಪರಂಪರಾಗತವಾಗಿ ಬರುತ್ತದೆ. ಅವನ ಅತ್ಯಂತ ಸಾಮೀಪ್ಯವನ್ನು ಪಡೆಯುವಂತೆ ಅದನ್ನು ಬೆಳೆಸುವ ಬಾಧ್ಯತೆ ನಮಗೆ ಬಿಟ್ಟದ್ದು."

ಬಾಬೂಜಿ ಮಹಾರಾಜರು, ರಾಮಚಂದ್ರರ ಸಮಗ್ರ ಕೃತಿಗಳು, ಸಂ. 1, ಅಧ್ಯಾಯ '2ನೇನಿಯಮ'

# ಪ್ರಶಿಕ್ಷಣ ಕಾರ್ಯಕ್ರಮಗಳು

## ಜೋಧ್‌ಪುರ, ರಾಜಸ್ಥಾನ

ಜೂನ್ 3ರಂದು 'ಭ್ರಾತೃತ್ವ'ದ ಮೇಲೆ ಕಾರ್ಯಾಗಾರವನ್ನು ನಡೆಸಲಾಯಿತು. ಗುರುಗಳ ಪ್ರಕಾರ ನಾವೇನಾಗಬೇಕೋ ಅದೇ ಆಗುವಂತೆ ಪ್ರಾರ್ಥನೆಯೊಂದಿಗೆ ಎಲ್ಲಾ ಅಭ್ಯಾಸಿಗಳೂ ಕಾರ್ಯಾಗಾರದಲ್ಲಿ ಉತ್ಸಾಹದಿಂದ ಪಾಲ್ಗೊಂಡರು. ಭೋಜನದ ನಂತರ ನಮ್ಮ ಕರ್ತವ್ಯದ ಬಗ್ಗೆ ವಿಚಾರ ಮಾಡಲು ಆತ್ಮಪರೀಕ್ಷಣಾ ಸಮಯ ನೀಡಲಾಗಿತ್ತು. ಮೊದಲು ಬದಲಾವಣೆಗೆ ಸಿದ್ಧರಾಗಿ, ನಂತರ ಎಲ್ಲಿ ಬದಲಾಗಬೇಕೆಂದು ನಿರ್ಧರಿಸಿ ಆಮೇಲೆ ಅದನ್ನು ಕಾರ್ಯರೂಪಕ್ಕೆ ತರುವುದೇ ಪ್ರತೀ ಅಭ್ಯಾಸಿಯ ವಿಚಾರವಾಗಿತ್ತು. ಶ್ರದ್ಧೆಯಿಂದ ಸಾಧನೆ ಮತ್ತು ಸೇವೆ ಮಾಡುತ್ತಾ ಗುರುಗಳಿಗೆ ವಿಧೇಯರಾಗಿ ಅವರಿಗೆ ಸಹಕಾರ ನೀಡಬೇಕೆನ್ನುವುದು ಅಭ್ಯಾಸಿಗಳ ಅಭಿಪ್ರಾಯವಾಗಿತ್ತು. ನಮ್ಮೆಲ್ಲರ ಅಂತರಾಳದಲ್ಲಿರುವ ಪ್ರೇಮವನ್ನು ಗುರುಗಳಿಗ ಕಡೆಗೆ ತಿರುಗಿಸಬೇಕು. ಗುರುಗಳು ನಮ್ಮಿಂದ ನಿರೀಕ್ಷಿಸುವುದನ್ನು ಸ್ವತಃ ಆದರ್ಶಪ್ರಾಯರಾಗಿ ನಮಗೆ ಕಲಿಸುತ್ತಾರೆ. ಸಂಜೆಯ ಸತ್ಸಂಗದ ನಂತರ, ಹೊಸ ಆರಂಭಕ್ಕಾಗಿ ನಡೆಸಿದ ಪ್ರಾರ್ಥನೆಯೊಂದಿಗೆ ಸಭೆಯು ಮುಕ್ತಾಯವಾಯಿತು.





# ಪ್ರಶಿಕ್ಷಣ ಕಾರ್ಯಕ್ರಮಗಳು ...ಮುಂದುವರೆದ ಭಾಗ

## ಶಿಲ್ಲಾಂಗ್, ಮೇಘಾಲಯ



ಶಿಲಾಂಗನಲ್ಲಿ,ಮೇ 6ರಂದು ಮೊಟ್ಟಮೊದಲನೆಯ ಬಾರಿ, ಹನ್ನೆರಡು ಅಭ್ಯಾಸಿಗಳಿಗಾಗಿ ಪ್ರಶಿಕ್ಷಣ ಕಾರ್ಯಕ್ರಮವೊಂದನ್ನು ಆಯೋಜಿಸಲಾಯಿತು. ಚಿಂತನೆ ಮತ್ತು ವೀಕ್ಷಣೆಗಳ ಮೂಲಕ ಧ್ಯಾನದ ಪದ್ಧತಿಯನ್ನು ಕಲಿತುಕೊಳ್ಳುವುದೇ ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಶ್ರವಣ ಮತ್ತು ದೃಶ್ಯಗಳ ಸಿ.ಡಿ. ಗಳ ತುಣುಕುಗಳ ಪ್ರಸ್ತುತಿ ಹಾಗೂ ಪೂಜ್ಯ ಬಾಬೂಜೀಯವರ 'ನಾನು ನಿಮಗೆ ಹೇಳುವೆ' ಎಂಬ ಶೀರ್ಷಿಕೆಯ ದೃಶ್ಯಪಟಗಳು, ಕಾರ್ಯಕ್ರಮದಲ್ಲಿ ಭಾಗವಹಿಸಿದವರನ್ನು ತಮ್ಮ ಧ್ಯಾನಮಾಡುವ ರೀತಿಯನ್ನು ಬದಲಾಯಿಸಿಕೊಳ್ಳುವ ಅವಶ್ಯಕತೆಯನ್ನು ಮನಗಾಣಿಸಿದವು.

## ಇಂದೋರ್, ಮಧ್ಯಪ್ರದೇಶ.

ಇಂದೋರ್ ಆಶ್ರಮದಲ್ಲಿ ಮೇ 26ರಂದು ದಿನಚರಿ ಬರೆಯುವ 'ಸಾಧನೆಯಲ್ಲಿ ನೆಲೆಸುವಿಕೆ' ಕಾರ್ಯಕ್ರಮದಲ್ಲಿ ಸುಮಾರು ಇಪ್ಪತ್ತು ಅಭ್ಯಾಸಿಗಳು ಭಾಗವಹಿಸಿದರು. ಕಾರ್ಯಕ್ರಮದ ಪ್ರಾರಂಭ ಸತ್ಸಂಗ, ತದನಂತರ ಗುರುಗಳ ದೃಶ್ಯಪಟದೊಂದಿಗೆ ಆಯಿತು. ಅಭ್ಯಾಸಿಗಳು ತಮ್ಮ ದಿನಚರಿ ಬರೆಯುವ ರೂಢಿ ಹಾಗೂ ಮಾದರಿಗಳ ಬಗ್ಗೆ ಆತ್ಮಪರೀಕ್ಷಣೆ ಮಾಡಿಕೊಂಡು, ಮುಖ್ಯಾಂಶಗಳನ್ನು ನಮೂದಿಸಿಕೊಂಡರು. ಸದ್ಗುರುಗಳ ಉಲ್ಲೇಖಗಳ ಪ್ರಸ್ತುತಿಯ ನಂತರ, ಗುಂಪು ಚರ್ಚೆಯೂ ಆಯಿತು. ಈ ಕಾರ್ಯಕ್ರಮವು ದಿನಚರಿಯ ಮಹತ್ವವನ್ನು ತಿಳಿಸಿಕೊಡುವ, ಗುರುಗಳ 'ಸ್ವ-ನಗ್ನತೆ' (Naked Self) ಎಂಬ ಭಾಷಣದೊಂದಿಗೆ ಮುಕ್ತಾಯವಾಯಿತು.

## ಉತ್ತರ ಪ್ರದೇಶ

ಗೋರಖ್‌ಪುರ ಕೇಂದ್ರದಲ್ಲಿ, 13 ಹಾಗೂ 20 ಮೇ ರಂದು "ಸಾಧನೆಯಲ್ಲಿ ನೆಲೆಸುವಿಕೆ"ಯ ಕಾರ್ಯಕ್ರಮದಲ್ಲಿ ದಿನಚರಿ ಬರೆಯುವುದು ಹಾಗು ಶುದ್ಧೀಕರಣದ ಬಗ್ಗೆ ಆಯೋಜಿಸಲಾದ ಕಾರ್ಯಕ್ರಮದಲ್ಲಿ, ಸುಮಾರು ಮೂವತ್ತು ಅಭ್ಯಾಸಿಗಳು ಪಾಲ್ಗೊಂಡರು. ಪಾಲ್ಗೊಂಡವರಿಗೆ ಓದಲು, ನಂತರ ಮಾರ್ಗದರ್ಶನದ ಪ್ರಕಾರ ತಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಹೇಳಲಾಯಿತು. ಎರಡನೇಯ ಸತ್ರದಲ್ಲಿ ಗುರುಗಳ ಭಾಷಣವನ್ನು ಬಿತ್ತರಿಸಿ ಅಭ್ಯಾಸಿಗಳಿಗೆ, ಕೆಲವು ಪ್ರಶ್ನೆ ಗಳಿಗೆ ಉತ್ತರಗಳನ್ನು ತಮ್ಮ ದಿನಚರಿಯಲ್ಲಿ ಬರೆಯಲು ತಿಳಿಸಲಾಯಿತು. ದಿನಚರಿ ಹಾಗು ಶುದ್ಧೀಕರಣದ ಮೇಲೆ ಎರಡು ಮಾದರಿಗಳನ್ನು ಮಾಡಲಾಯಿತು. ಇಂತಹ ಕಾರ್ಯಕ್ರಮಗಳನ್ನು ಬೆಹರಾಯಿಚ್, ಹಾಗು ಬಲಾಯಿ ಕೇಂದ್ರಗಳಲ್ಲಿಯೂ ಪ್ರಾರಂಭಿಸಲಾಯಿತು.



## ಯೋಜನಾ ಕಮ್ಮಟ,- ಮೈಸೂರು, ಕರ್ನಾಟಕ.

ಮೇ19, 20ರಂದು ಮೈಸೂರು ಆಶ್ರಮದಲ್ಲಿ ದಕ್ಷಿಣ ಕರ್ನಾಟಕ ವಲಯದ ಜಿಲ್ಲೆ ಮತ್ತು ಕೇಂದ್ರ ನಿರ್ವಾಹಕರಿಗಾಗಿ ಯೋಜನಾ ಕಮ್ಮಟವೊಂದನ್ನು ನೆರವೇರಿಸಲಾಯಿತು. ಈ ವಲಯವು ಹದಿಮೂರು ನಿರ್ವಾಹಕರನ್ನು ಹೊಂದಿದ್ದು, ಬೆಂಗಳೂರಿನಲ್ಲಿರುವ ಸಹಾಯಕ ದಳದ ಸ್ವಯಂ ಸೇವಕರ ಬೆಂಬಲವೂ ಇದೆ. ಈ ಕಮ್ಮಟವು, ಭಾಗವಹಿಸಿದವರ ತಮ್ಮ ಪರಿಚಯಗಳೊಂದಿಗೆ ಪ್ರಾರಂಭವಾಯಿತು. ನಂತರ ವಲಯ ಪ್ರಮುಖರು, ವಲಯದ ಸಧ್ಯಸ್ಥಿತಿಯ ಬಗ್ಗೆ ವಿವರಣೆಯನ್ನಿತ್ತರು. ಸಹಭಾಗಿಗಳನ್ನು ಗುಂಪುಗಳನ್ನಾಗಿ ಮಾಡಿ, ಕೇಂದ್ರಗಳಲ್ಲಿಯ ಸಧ್ಯದ ಸ್ಥಿತಿ, ಕಳೆದ ಒಂದು ವರ್ಷದಲ್ಲಿ ಕೈಗೊಂಡ ಮುಖ್ಯ ಚಟುವಟಿಕೆಗಳು ಹಾಗೂ ತಾವು ಎದುರಿಸಬೇಕಾದ ವಿರೋಧಗಳ ಬಗ್ಗೆ ಚರ್ಚಿಸಿದರು. ಸತ್ಸಂಗದ ನಂತರ ಸದ್ಗುರುಗಳ "ಕರ್ತವ್ಯ ಹಾಗು ಹೊಣೆಗಾರಿಕೆ"ಯ ಬಗೆಗಿನ ದೃಶ್ಯಪಟವನ್ನು ತೋರಿಸಲಾಯಿತು. ಗುಂಪುಗಳು ಮತ್ತೆ, ಕೇಂದ್ರಗಳಲ್ಲಿ ಗುಣಮಟ್ಟದ ಹಾಗೂ ಅಭ್ಯಾಸಿಗಳ ಸಂಖ್ಯೆಯಲ್ಲಿ ಸುಧಾರಣೆಗಳ ಬಗ್ಗೆ, ಆಯೋಜನೆಯ ಚರ್ಚೆ ಮಾಡಿದವು. ದೊಡ್ಡ ಕೇಂದ್ರಗಳೂ ಸಹ ಆಶ್ರಮಗಳ ನಿರ್ವಹಣೆಯ ಬಗೆಗಿನ ಚಟುವಟಿಕೆಗಳ ಬಗ್ಗೆ ಚರ್ಚಿಸಿದರು. ಉದ್ದಿಷ್ಟ ಸಾಧನೆಗಳಲ್ಲಿ ಹೆಚ್ಚಿಗೆ ಗಮನ ಕೊಡದೆ, ಹೃತ್ಪೂರ್ವಕವಾಗಿ ಕಾರ್ಯಗಳ ಕಡೆಗೆ ಒಲವಿರುವಂತೆ ಆಯೋಜನೆಗಳಿರಬೇಕೆಂಬುದರ ಬಗ್ಗೆ ಮತ್ತೆ ಒತ್ತಿ ಹೇಳಲಾಯಿತು. ಎಲ್ಲಾ ಸಹಭಾಗಿಗಳು ಬಿಚ್ಚು ಮನಸ್ಸಿನವರಾಗಿ ಸರ್ವಸಾಮಾನ್ಯವಾದ ಸಮಸ್ಯೆಗಳಿಗೆ ಹೊಸ ಹೊಸ ಪರಿಹಾರಗಳು ದೊರೆತುದಕ್ಕಾಗಿ ಆನಂದ ಪಟ್ಟರು.

## ಗೋಧ್ರಾ, ಗುಜರಾತ್

ಮೇ 19 ದಂದು ಗೋದ್ರಾ ಆಶ್ರಮದಲ್ಲಿ 13 ಹೊಸದಾಗಿ ಸೇರಿದ ಅಭ್ಯಾಸಿಗಳಿಗಾಗಿ, "ಕ್ರಿಸ್ಟ" ನವರು ವಿಧಿಸಿದ ಪ್ರಕಾರ ಮೊದಲನೆಯ ಸ್ತರದ ಪ್ರಶಿಕ್ಷಣ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕೆಲ ಅತಿಥಿಗಳು ಹಾಗು ಅಭ್ಯಾಸಿಗಳ ಸಂಬಂಧಿಕರೂ ಸಹ ಆಗಮಿಸಿದ್ದರು. ಪ್ರಶಿಕ್ಷಣದ ತರುವಾಯ ಪ್ರಶ್ನೋತ್ತರ ಸತ್ರವೂ ಆಯಿತು. ಎಲ್ಲಾ ಅಭ್ಯಾಸಿಗಳು ಮತ್ತು ಅತಿಥಿಗಳಿಗೆ "ಪರಿಚಯ ಸಂಚು" ಗಳನ್ನು ವಿತರಿಸಲಾಯಿತು. ಈ ಕಾರ್ಯಕ್ರಮ, ಮಿಷನ್ನಿಗೆ ಹೊಸದಾಗಿ ಸೇರಿಕೊಂಡ ಅಭ್ಯಾಸಿಗಳಿಗೆ ಸ್ಫೂರ್ತಿದಾಯಕವೂ, ಜ್ಞಾನವರ್ಧಕವೂ ಆಗಿತ್ತು.





ಪ್ರಭಾ ಕೇಂದ್ರ

# ರತ್ಲಾಮ್ ಆಶ್ರಮ, ಮಧ್ಯಪ್ರದೇಶ




ರತ್ಲಾಮ್, ಪಶ್ಚಿಮ ಮಧ್ಯಪ್ರದೇಶದ ಮಹತ್ವದ ಜಿಲ್ಲೆಗಳಲ್ಲೊಂದಾಗಿದ್ದು, ಇದು ಮಾಲ್ವಾ ವಿಭಾಗವೆಂದೂ ಪರಿಚಿತವಿದೆ. ರತ್ಲಾಮ ಪಟ್ಟಣವು ಜಿಲ್ಲೆಯ ಆಡಳಿತ ಮುಖ್ಯಾಲಯವಾಗಿದ್ದುದಲ್ಲದೆ ಮಹತ್ವದ ವ್ಯಾಪಾರ ಕೇಂದ್ರವೂ ಆಗಿದೆ. ಮುಂಬೈ ಹಾಗು ದೆಹಲಿಯಿಂದ ರೇಲ್ವೆಮೂಲಕ ರತ್ಲಾಮ ತಲುಪಲು ಹನ್ನೆರಡು ಗಂಟೆಗಳಿಗೂ ಕಡಿಮೆ ವೇಳೆ ಹಿಡಿಯುತ್ತದೆ. ಇಂದೋರ ಸಮೀಪದ ವಿಮಾನ ನಿಲ್ದಾಣವಾಗಿದೆ. ಮಧ್ಯಪ್ರದೇಶದ ಉಳಿದ ಎಲ್ಲಾ ಭಾಗಗಳಿಗೂ ಅಲ್ಲದೆ ನೆರೆ ರಾಜ್ಯಗಳಾದ ಗುಜರಾತ ಮತ್ತು ರಾಜಸ್ಥಾನಗಳಿಗೂ ಒಳ್ಳೆಯ ರಸ್ತೆ ಸಾರಿಗೆ ಸಂಪರ್ಕವಿದೆ. ಇಂದೋರ, ಉಜ್ಜೈನ್ ಹಾಗೂ ಬರೋಡಾ ಪಟ್ಟಣಗಳು ಮಿಷನ್ನಿನ ಸಮೀಪದ ಕೇಂದ್ರಗಳಾಗಿವೆ.

ಆಶ್ರಮವು ರಾಜ್ಯ ಮಹಾಮಾರ್ಗದ ಮೇಲಿನ ಬರಬಾದ ಎಂಬ ಗ್ರಾಮದಲ್ಲಿದ್ದು, ರತ್ಲಾಮ ರೇಲ್ವೆ ನಿಲ್ದಾಣದಿಂದ 6 ಕಿ.ಮೀ. ಅಂತರದಲ್ಲಿದೆ. ಜಮೀನಿನ ಒಟ್ಟು ಕ್ಷೇತ್ರ 14,500 ಚ.ಅ. ಇದೆ. 1200 ಚ.ಅ. ಯಷ್ಟು ಧ್ಯಾನಕಕ್ಷವನ್ನು ಕಟ್ಟಲಾಗಿದ್ದು ಸುಮಾರು ನೂರು ಅಭ್ಯಾಸಿಗಳು ಕೂಡಲು ಅನುಕೂಲವಿದೆ. ಇದಲ್ಲದೆ ಒಂದು ಅಡುಗೆಮನೆ ಮತ್ತು ಸುವ್ಯವಸ್ಥಿತವಾದ ಉದ್ಯಾನವಿದೆ.



ಈ ಆಶ್ರಮವು, ನಿವಾಸಿಗಳ ವಸಾಹತಿನ ಒಂದು ಭಾಗ ವಾಗಿದ್ದು ಉಳಿದೆಲ್ಲ ನಿವೇಶನಗಳು ಅಭ್ಯಾಸಿಗಳ ಸ್ವತ್ತಿನವಾಗಿವೆ. ಮಿಷನ್ನಿನ ಪರವಾಗಿ ಸಹೋದರ ಉಮಾಶಂಕರ ವಾಜಪೇಯಿಯವರು ಜಮೀನಿನ ಸಂಬಂಧದ ಸಂಪ್ರದಾಯಗಳನ್ನು ಪೂರ್ಣಗೊಳಿಸಿದರು. ನಂತರ ಗುರುಗಳು 27ನೇ ಜೂನ್ 2010 ರಿಂದ ಹೊಸದಾಗಿ ಕಟ್ಟಲಾದ ಆಶ್ರಮದಲ್ಲಿ ಧ್ಯಾನಮಾಡಲು ಅನುಮತಿಯನ್ನಿತ್ತರು. ಈಗ ರತ್ಲಾಮ ಕೇಂದ್ರದಲ್ಲಿ ಸುಮಾರು 65 ಅಭ್ಯಾಸಿಗಳಿದ್ದಾರೆ.



ಮಿಷನ್ನಿನ ಪ್ರಾರಂಭ 1993ರಲ್ಲಿ ಇಬ್ಬರು ಅಭ್ಯಾಸಿಗಳಿಂದ ಆಗಿತ್ತು. ನೆರೆ ಕೇಂದ್ರ ಗಳಾದ ಇಂದೋರ ಮತ್ತು ಉಜ್ಜೈನ ಗಳಲ್ಲಿಯ ಪ್ರಶಿಕ್ಷರು, ಎಪ್ರಿಲ್ 2004ರಲ್ಲಿ ಈಗಿನ ಪ್ರಶಿಕ್ಷಕರ ನಿಯುಕ್ತಿಯಾಗುವವರೆಗೂ ಈ ಕೇಂದ್ರಕ್ಕೆ ಬೆಂಬಲವನ್ನೀಯುತ್ತಿದ್ದರು. ವೈಯಕ್ತಿಕ ಬೈಠಕುಗಳು, ಬುಧವಾರ ಹಾಗೂ ರವಿವಾರದ ಸತ್ಸಂಗಗಳು, ಸಮಾರಂಭಗಳು, 2010ರಲ್ಲಿ ಹೊಸದಾಗಿ ಖರೀದಿಸಿದ ಆಶ್ರಮದ ಜಾಗಕ್ಕೆ ಬರುವವರೆಗೂ ಒಬ್ಬ ಅಭ್ಯಾಸಿಯ ಮನೆಯಲ್ಲಿ ಜರುಗುತ್ತಿದ್ದವು. ಅಭ್ಯಾಸಿಗಳು 2005 ರಲ್ಲಿ ಆಶ್ರಮಕ್ಕಾಗಿ ಜಮೀನನ್ನು ಖರೀದಿಸಿದರು.



ಅಭ್ಯಾಸಿಗಳ ಕಮ್ಮಟಗಳು, ಮುಕ್ತಸಭೆಗಳು, ಅನೇಕ ಶಾಲೆಗಳಲ್ಲಿನ ನಿಬಂಧ ಚಟುವಟಿಕೆಗಳು, ಅಧ್ಯಾತ್ಮ ಶೋಧಕರಿಗಾಗಿ ಮಾಹಿತಿ ಕೇಂದ್ರವಾದ ಸ್ವಾಗತ ಕಕ್ಷ ಇವೆಲ್ಲಾ ಇಲ್ಲಿನ ಚಟುವಟಿಕೆಗಳಾಗಿವೆ. ಈ ಕೇಂದ್ರವು ನೆರೆಯ ಸಣ್ಣ ಕೇಂದ್ರಗಳಾದ ಖಾಚ್ರೋಡ, ಜಾವ್ರಾ, ಮಾಂಡಸೌರ, ನೀಮುಚ, ಖೋರ, (ವಿಕ್ರಮ ಸಿಮೆಂಟ) ಮತ್ತು ಬನ್ಸ್ವಾರಾಗಳಿಗೆ ರವಿವಾರದ ಹಾಗೂ ಇತರ ಪೂರ್ಣದಿನದ ಕಾರ್ಯಕ್ರಮಗಳಲ್ಲಿ ಸಹಭಾಗಿಯನ್ನಾಗಿಸಿಕೊಂಡು, ಬೆಂಬಲಿಸುತ್ತಾದೆ.



ರತ್ಲಾಮ ಕೇಂದ್ರದ ಅಭ್ಯಾಸಿಗಳು, ಗುರುಗಳ ಭೇಟಿಯ ಲಾಭ ಪಡೆದಿಲ್ಲವಾಗಿ ಅವರೆಲ್ಲರೂ ಆ ಅವಕಾಶಕ್ಕಾಗಿ ಹಾತೊರೆಯುತ್ತಿದ್ದಾರೆ. ಆದರೂ ಅವರು, ಪೂಜ್ಯ ಲಾಲಾಜೀಯವರು ತಮ್ಮ ರಾವತಿ ಎಂಬ ಸ್ಥಳಕ್ಕೆ (ರತ್ಲಾಮದಿಂದ 33 ಕಿ.ಮೀ. ದೂರದ ಒಂದು ಹಳ್ಳಿ) ಪ್ರವಾಸ ಕೈಗೊಂಡಾಗ, ರತ್ಲಾಮಗೆ ಭೇಟಿ ನೀಡಿ, ನಮ್ಮ ಆಶ್ರಮಕ್ಕೆ ಅತಿ ಸಮೀಪದಲ್ಲಿರುವ ಬಾಬಾ ಮೂರಖದಾಸರ ಆಶ್ರಮದಲ್ಲಿ, ತಂಗಿದ್ದರೆಂಬ ಸುಪರಿಚಿತ ನೆನಪನ್ನು ಪೋಷಿಸಿಕೊಂಡಿದ್ದಾರೆ. ರಾಮಚಂದ್ರರ (ಲಾಲಾಜೀ) ಸಮಗ್ರ ಕೃತಿಗಳು ಸಂ.2,ಪುಟ 122.

To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org
© 2011 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.